## ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿ, ಸಾರ್ವಜನಿಕ ಆರೋಗ್ಯ ಘನತ್ಯಾಜ್ಯ ಮತ್ತು ವಿಪತ್ತು ನಿರ್ವಹಣೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:೦೫-೦೬-2023ರ ನಡವಳಿಗಳು

**ವಿಷಯದ ಸಂಖ್ಯೆ:22/2023-24**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ (ನೊ). ಬೆಂಗಳೂರು ರವರು / ಹಿರಿಯ ಆರೋಗ್ಯ ಪರಿವೀಕ್ಷಕರು ಇವರುಗಳ ಮನವಿ ಪತ್ರ ದಿನಾಂಕ:17-05-2022 ಮತ್ತು 21-05-2022ರ ಪತ್ರದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯದ ಮೇಲ್ವಿಚಾರಣೆಗೆ ಉದ್ದಿಮೆಗಳ ತಪಾಸಣೆ ಸಾಂಕ್ರಾಮಿಕ ರೋಗಗಳ ಬಗ್ಗೆ ಮುನ್ನಚ್ಚರಿಕೆ ಹಾಗೂ ನಿಯಂತ್ರಣ ಸ್ವಚ್ಚತೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಸೇರಿದಂತೆ ಸಾರ್ವಜನಿಕ ಆರೋಗ್ಯ ಇಲಾಖೆಯ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿರುವ ಹಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ ಸೇವಾವಧಿಯಲ್ಲಿ ಯಾವುದೇ ಮುಂಬಡ್ತಿ ಇಲ್ಲದೇ ನಿವೃತ್ತಿ ಹೊಂದುತ್ತಿರುವ ಹಿನ್ನೆಲೆಯಲ್ಲಿ ದಿನಾಂಕ:28-11-2011ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ ಈ ವಿಷಯದ ಸಂಖ್ಯೆ:22(198)/2011-12 ದಿನಾಂಕ: 28-11-2011ರ ನಡವಳಿಯಲ್ಲಿ ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ ಕ್ಷೇತ್ರ ಕಾರ್ಯಗಳ ಹಿತದೃಷ್ಟಿಯಿಂದ ವಿಧಾನಸಭಾ ಕ್ಷೇತ್ರವಾರು ಒಟ್ಟು 36 ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಸೃಜಿಸಿ ಅರ್ಹತೆ ಹೊಂದಿರುವ ಹಿರಿಯ ಆರೋಗ್ಯ ಪರಿವೀಕ್ಷಕರ ವೃಂದದಿಂದ ಮುಂಬಡ್ತಿ ಮೂಲಕ ತುಂಬಲು ನಿರ್ಣಯಿಸಲಾಗಿರುವುದರಿಂದ ಸದರಿ ಹುದ್ದೆಗಳನ್ನು ಸೃಜಿಸಲು ಹಾಗೂ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ತಿದ್ದುಪಡಿ ತರಲು ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರು ಕಛೇರಿ ಸಂಖ್ಯೆ: ಬಿ12(4)ಪಿಆರ್/137/2009-10 ದಿನಾಂಕ: 09-02-2012ರಂದು ಸರ್ಕಾರಕ್ಕೆ ಲಿಖಿತ ಪತ್ರದ ಮೂಲಕ ಕೋರಲಾಗಿರುತ್ತದೆ.

ಮುಂದುವರೆದು, ಪ್ರತಿಯೊಬ್ಬ ಸರ್ಕಾರಿ ನೌಕರರಿಗೂ ತನ್ನ ಸೇವಾ ಅವಧಿಯಲ್ಲಿ ಕನಿಷ್ಟ ಮೂರು ಬಾರಿ ಪದನ್ನೋತಿ ಹೊಂದುವ ಅವಕಾಶವನ್ನು ಸರ್ಕಾರ ಕಲ್ಪಿಸಿಕೊಡಬೇಕು ಎನ್ನುವ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶ ಹಾಗೂ ಪಾಲಿಕೆಯ ಹಿರಿಯ ಆರೋಗ್ಯ ಪರಿವೀಕ್ಷಕರುಗಳು ತಮ್ಮ ಸೇವಾ ಅವಧಿಯಲ್ಲಿ ಯಾವುದೇ ಮುಂಬಡ್ತಿ ಇಲ್ಲದೇ ನಿವೃತ್ತಿ ಹೊಂದುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಬಿ.ಬಿ.ಎಂ.ಪಿ.ಯಲ್ಲಿ ನೇರ ನೇಮಕಾತಿ ಅಡಿಯಲ್ಲಿ ಕಿರಿಯ ಆರೋಗ್ಯ ಪರಿವೀಕ್ಷಕರಾಗಿ ನೇಮಕಾತಿ ಹೊಂದಿ ಹಾಲಿ ಹಿರಿಯ ಆರೋಗ್ಯ ಪರಿವೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವವರುಗಳಿಗೆ ಮುಂದಿನ ಯಾವುದೇ ಹುದ್ದೆಗೆ ಪದನ್ನೋತಿ ಅವಕಾಶ ಇಲ್ಲದ ಕಾರಣ ಹಾಗೂ ದಿನಾಂಕ:29-11-2011ರ ಕೌನ್ಸಿಲ್ ನಿರ್ಣಯದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹಿರಿಯ ಆರೋಗ್ಯ ಪರಿವೀಕ್ಷಕರುಗಳ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್

ಪಿಟಿಷನ್ ಸಂಖ್ಯೆ: 41474-41476/2017 (ಎಸ್-ಆರ್.ಇ.ಎಸ್) ಅನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದು, ಸದರಿ ದಾವೆಯ ಮೇಲೆ ಮಾನ್ಯ ಉಚ್ಚ ನ್ಯಾಯಾಲಯವು ಈ ಕೆಳಕಂಡಂತೆ ಆದೇಶ ನೀಡಿರುತ್ತದೆ.

1. The Petitioners are before this court seeking issue of mandamus to direct respondent No. I to consider the recommendation / Resolution at Annexures 'E' and 'F' to the petitions.
2. The petitioners contend that they are working in the respondent Corporation and if the Resolution as passes and the communication as sent by respondent No. 2 is considered by respondent No.1 and appropriate orders, are passed thereafter, the petitioners would be entailed to consideration to such as, thus avoiding the stagnation of the petitioners in the same post. It is in that light the petitioners are before this Court seeking that appropriate mandamus be issued in that regard.
3. A perusal of the documents at Annexure 'E' would disclose that the standing committee thought its resolution dated: 09-08-2016 had made the recommendation or creation of the posts. Pursuant thereto, respondent No. 2 has addressed the communication dated : 14-12-2016 at Annexure 'F' seeking Consideration in this regard and for appropriate approval from respondent No. 1, Since no consideration is made by Respondent N.1, the appropriate course for this court is to direct respondent No.1 do take into consideration the said Resolution and the Communication, consider all aspects of the matter and take a decision one way or the other in accordance with law, if no such decision has been taken as on today.

   To enable the same, the petitioners are granted liberty of submitting one more copy of the documents along with the representation to respondent No. 1 along with a copy of this order.

   On receipt of the same, respondent No. 1 shall be taking a submitting one more copy of the documents along with the representation to respondent No. 1 along with a copy of the order

   On receipt of the same, respondent No. 1 shall be taking a decision in accordance with law as expeditiously as possible, but not later than three months from the date on which a copy of the representation is submitted.

   Petitions are accordingly disposed of.

ಈ ಸಂಬಂಧ ದಿನಾಂಕ:16-03-2020ರಂದು ಪಾಲಿಕೆ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ವಯ ಆರೋಗ್ಯ ಇಲಾಖೆಯಲ್ಲಿ ಹಿರಿಯ ಆರೋಗ್ಯ ಪರಿವೀಕ್ಷಕರು ವೃಂದದಿಂದ ಯಾವುದೇ ಹುದ್ದೆಗೆ ಮುಂಬಡ್ತಿ ಅವಕಾಶವಿರುವುದಿಲ್ಲ ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು ಹುದ್ದೆಯಲ್ಲಿಯೇ ಸೇವೆಯು ಕೊನೆಗೊಳ್ಳಲಿರುವ ಹಿನ್ನೆಲೆಯಲ್ಲಿ ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ. ರವರ ದಿನಾಂಕ: 21-03-2019ರ ಪತ್ರದಲ್ಲಿ ಆರೋಗ್ಯ ಇಲಾಖೆಯಲ್ಲಿ ಘನತ್ಯಾಜ್ಯ ನಿರ್ವಹಣೆ, ಆರೋಗ್ಯಾಧಿಕಾರಿಗಳು, ಉಪ ಆರೋಗ್ಯಾಧಿಕಾರಿ, ಆರೋಗ್ಯ ವೈದ್ಯಾಧಿಕಾರಿ, ಅಧೀನದಲ್ಲಿ ಯು.ಪಿ.ಹೆಚ್.ಸಿ. ರಾಷ್ಟ್ರೀಯ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ ವಾರ್ಡ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಸಾರ್ವಜನಿಕ ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆಯಲ್ಲಿ ಕಾರ್ಯನಿರ್ವಹಿಸುವ

ಸಿಬ್ಬಂದಿಗಳ ದೈನಂದಿನ ಕಾರ್ಯ ಚಟುವಟಿಕೆಗಳ ಉಸ್ತುವಾರಿ ಮತ್ತು ಮೇಲ್ವಿಚಾರಣೆ ಕಾರ್ಯನಿರ್ವಹಿಸಲು ವಿಭಾಗವಾರು 36 ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಸೃಜನೆ ಮಾಡುವುದಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ದಿನಾಂಕ:02-09-2022ರಂದು ಸಲ್ಲಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆಯ (ಬಿ.ಬಿ.ಎಂ.ಪಿ) ರವರ ಆದೇಶ ಸಂಖ್ಯೆ: ನಅಇ 266 ಎಂಎನ್‌ಯು 2022 ದಿ:24-03-2023 ಆದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಂಜೂರಾಗಿರುವ 36 ಹಿರಿಯ ಆರೋಗ್ಯ ಪರಿವೀಕ್ಷಕರ (ಗ್ರೂಪ್-'ಸಿ' ಹುದ್ದೆ) ವೇತನ ಶ್ರೇಣಿ ರೂ. 30350-58250) ಹುದ್ದೆಗಳನ್ನು ಹೆಲ್ತ್ ಸೂಪರ್ ವೈಸರ್ ಗ್ರೂಪ್-ಬಿ ಹುದ್ದೆಗೆ (ವೇತನ ಶ್ರೇಣಿ ರೂ.43100-83900) ಈ ಕೆಳಕಂಡ ಷರತ್ತಿಗೊಳಪಟ್ಟು ಉನ್ನತೀಕರಿಸಿ ಆದೇಶಿಸಲಾಗಿರುತ್ತದೆ..

ಷರತ್ತುಗಳು:-

1. ಪ್ರಸ್ತಾವನೆಯಲ್ಲಿ ಉನ್ನತೀಕರಿಸಿದ 36 ಹುದ್ದೆಗಳ ವೇತನ, ಪಿಂಚಣಿ ಮತ್ತು ಭತ್ಯೆಗಳನ್ನು ಬಿ.ಬಿ.ಎಂ.ಪಿ.ಯು ತನ್ನ ಸ್ವಂತ ಸಂಪನ್ಮೂಲದಿಂದ ಭರಿಸತಕ್ಕದ್ದು.
2. ಹೊಸದಾಗಿ ಉನ್ನತೀಕರಿಸಿದ ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಹೆಚ್ಚಿನ ಕೆಲಸದ ಒತ್ತಡ ಇರುವ ಪಾಲಿಕೆಯ ವಲಯವಾರು / ವಿಭಾಗವಾರು / ಉಪ ವಿಭಾಗವಾರು / ವಾರ್ಡ್‌ವಾರು ಹಂಚಿಕೆ ಮಾಡತಕ್ಕದ್ದು.
3. ಮೇಲ್ಕಂಡಂತೆ ಉನ್ನತೀಕರಿಸಿದ ಹೆಲ್ತ್ ಸೂಪರ್ ವೈಸರ್‌ಗಳು ಈ ಕೆಳಕಂಡ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸತಕ್ಕದ್ದು.
   a) Implementation of various national health programmes which are implemented throguh UPHC. Monitoring adn supervising senior/junior health inspectors and filed staff of public health and solid waste management (SWM).
   b) Monitoring and Supervision of Sanitary Daffedars, Pourakarmikas and Marshal's in collection, Secondary Storage, Transportation and scientific disposal of Waste generated in BBMP Limit.
   c) Implementation of National Health Programs.
   d) Maintenance of vital statistics.
   e) Vector borne disease control activities.
   f) Regulation of trades.
   g) Control and management of Communicable diseases.
   h) Monitoring of Primary health care delivery and referral system.
   i) Enforcement of banned plastic usage."

ಮೇಲ್ಕಂಡಂತೆ ಉನ್ನತೀಕರಿಸಿದ ಈ ಹುದ್ದೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಸೇರ್ಪಡೆಗೊಳಿಸಲು ಪ್ರತ್ಯೇಕವಾಗಿ ಕ್ರಮವಹಿಸುವುದಾಗಿ ತಿಳಿಸಲಾಗಿರುತ್ತದೆ.

ಮೇಲ್ಕಂಡ ಸರ್ಕಾರದ ಆದೇಶದಂತೆ ಪ್ರಸ್ತುತ, ಪಾಲಿಕೆಗೆ 36 ಹಿರಿಯ ಆರೋಗ್ಯ ಪರಿವೀಕ್ಷಕರುಗಳ ಹುದ್ದೆಗಳನ್ನು ಹೆಲ್ತ್ ಸೂಪರ್ ವೈಸರ್ ಹುದ್ದೆಗೆ ಉನ್ನತೀಕರಿಸಿದ್ದು, ಆದರೆ ಸರ್ಕಾರದ ಅಧಿಸೂಚನೆ ಸಂಖ್ಯೆ: 66

ಬಿಬಿಎಸ್ 2022 ದಿನಾಂಕ: 14-07-2022 ಮತ್ತು ಬಿಬಿಎಂಪಿ ಮಾನ್ಯ ಮುಖ್ಯ ಆಯುಕ್ತರ ಆದೇಶ ಸಂಖ್ಯೆ: ಬಿ12(1)ಪಿಆರ್/202/2022-23 ದಿನಾಂಕ: 23-03-2023ರ ಪ್ರಕಾರ 198 ವಾರ್ಡ್‌ಗಳಿಂದ 243 ವಾರ್ಡ್‌ಗಳಿಗೆ ಮಂಜೂರಾತಿ ನೀಡಿರುವುದರಿಂದ ಹಾಲಿ 64 ಉಪ ವಿಭಾಗಗಳಿದ್ದು, ಹೆಚ್ಚುವರಿ 11 ಉಪ ವಿಭಾಗಗಳು ಸೇರಿ ಒಟ್ಟು 75 ಉಪ ವಿಭಾಗಗಳನ್ನಾಗಿಸಿರುವುದರಿಂದ ಒಟ್ಟು 75 ಹೆಲ್ತ್ ಸೂಪರ್ ವೈಸರ್ ಹುದ್ದೆಗಳು ಅಗತ್ಯವಿರುತ್ತದೆ. ಆದ್ದರಿಂದ, ಉಪ ವಿಭಾಗಕ್ಕೆ ಒಂದರಂತೆ ಒಟ್ಟು 75 ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಸೃಜಿಸುವ ಸಲುವಾಗಿ ಕ್ರಮಕೈಗೊಳ್ಳುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ (ನೊ). ಬೆಂಗಳೂರು ರವರು / ಹಿರಿಯ ಆರೋಗ್ಯ ಪರಿವೀಕ್ಷಕರು ಇವರುಗಳ ಮನವಿ ಪತ್ರ ದಿನಾಂಕ:17-05-2022 ಮತ್ತು 21-05-2022ರ ಪತ್ರದಲ್ಲಿ, ರವರು/ಹಿರಿಯ ಆರೋಗ್ಯ ಪರಿವೀಕ್ಷಕರುಗಳು ಕೋರಿರುತ್ತಾರೆ.

ಈ ಸಂಬಂಧ ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ರವರ ಅಭಿಪ್ರಾಯ ದಿನಾಂಕ:17-4-2023ರಲ್ಲಿ ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಬಿವೃದ್ಧಿ ಇಲಾಖೆ ರವರ ದಿನಾಂಕ: 24-03-2023ರ ಆದೇಶದ ಪ್ರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 36 ಹೆಲ್ತ್ ಸೂಪರ್ ವೈಸರ್ ಹುದ್ದೆಯನ್ನು ಸೃಜಿಸಿ, ಸದರಿ ಹೆಲ್ತ್ ಸೂಪರ್ ವೈಸರ್ ಹುದ್ದೆಗಳಿಗೆ ಕರ್ತವ್ಯಗಳನ್ನು ನಿಗದಿಪಡಿಸಿರುತ್ತಾರೆ. ಪಾಲಿಕೆಯ ಆರೋಗ್ಯ ಇಲಾಖೆಯ ಮತ್ತು ಘನತ್ಯಾಜ್ಯ ನಿರ್ವಹಣೆ ಇಲಾಖೆಯ ಕೆಲಸ ಕಾರ್ಯಗಳನ್ನು ಸುಗಮವಾಗಿ ನಿರ್ವಹಿಸಲು ಹೆಚ್ಚುವರಿ 39 ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಸೃಜಿಸಬಹುದಾಗಿರುತ್ತದೆ.

ಕಾನೂನು ಕೋಶದ ಮುಖ್ಯಸ್ಥರವರ ಅಭಿಪ್ರಾಯ ವರದಿ ದಿ:27-04-2023ರಲ್ಲಿ ಮುಖ್ಯ ಆರೋಗ್ಯಾಧಿಕಾರಿ (ಸಾ.ಆ.) ರವರ ವರದಿಯ ಹಿನ್ನೆಲೆಯಲ್ಲಿ ಪ್ರಸ್ತುತವಾಗಿ 198 ವಾರ್ಡ್‌ಗಳಿಂದ ಹೆಚ್ಚುವರಿಯಾಗಿ ಸರ್ಕಾರದ ಅದಿಸೂಚನೆ ಸಂಖ್ಯೆ: ನಅಇ 66 ಬಿಬಿಎಸ್ 2022, ದಿನಾಂಕ: 14-07-2022ರ 243 ವಾರ್ಡ್‌ಗಳು ಆಗಿ 75 ಉಪ ವಿಭಾಗಗಾಗಿ ಹೆಚ್ಚುವರಿಯಾಗಿರುವುದರಿಂದ ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ) ರವರ ಪತ್ರ ಸಂಖ್ಯೆ: ನಅಇ 266 ಎಂಎನ್‌ಯು 2022 ದಿ: 24-03-2023ರ ಆದೇಶದಲ್ಲಿ 36 ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಸೃಜಿಸಿ ಉನ್ನತಿಕರೀಸಿ, ಈ ಕೆಳಕಂಡ ಷರತ್ತುಗಳನ್ನು ವಿಧಿಸಿರುವುದರಿಂದ.

1. ಪ್ರಸ್ತಾವನೆಯಲ್ಲಿ ಉನ್ನತೀಕರಿಸಿದ 36 ಹುದ್ದೆಗಳ ವೇತನ, ಪಿಂಚಣಿ ಮತ್ತು ಭತ್ಯೆಗಳನ್ನು ಬಿ.ಬಿ.ಎಂ.ಪಿ.ಯು ತನ್ನ ಸ್ವಂತ ಸಂಪನ್ಮೂಲದಿಂದ ಭರಿಸತಕ್ಕದ್ದು.
2. ಹೊಸದಾಗಿ ಉನ್ನತೀಕರಿಸಿದ ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಹೆಚ್ಚಿನ ಕೆಲಸದ ಒತ್ತಡ ಇರುವ ಪಾಲಿಕೆಯ ವಲಯವಾರು / ವಿಭಾಗವಾರು / ಉಪ ವಿಭಾಗವಾರು / ವಾರ್ಡ್‌ವಾರು ಹಂಚಿಕೆ ಮಾಡತಕ್ಕದ್ದು.

ಉಪ ವಿಭಾಗವಾರು ಹಂಚಿಕೆ ಮಾಡತಕ್ಕದ್ದು ಎಂದು ಷರತ್ತು ವಿಧಿಸಿರುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕೆಲಸ ಕಾರ್ಯಗಳ ಹಿತದೃಷ್ಠಿಯಿಂದ 39 ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಸೃಜಿಸಲು ಆಡಳಿತಾತ್ಮಕವಾಗಿ ತೀರ್ಮಾನ ತೆಗೆದುಕೊಳ್ಳಲು ಕೋರಿ ಕಡತವನ್ನು ಹಿಂದಿರುಗಿಸಿರುತ್ತಾರೆ.

ಹುದ್ದೆಗಳನ್ನು ಸೃಜಿಸುವ ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯ ಲೆಕ್ಕಾಧಿಕಾರಿಗಳ ಅಭಿಪ್ರಾಯ ವರದಿ ದಿನಾಂಕ:22-05-2023ರಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 66 ಬಿಬಿಎಸ್ 2022 ದಿನಾಂಕ: 14-07-2022 ಮತ್ತು ಪಾಲಿಕೆಯ ಮಾನ್ಯ ಮುಖ್ಯ ಆಯುಕ್ತರವರ ಆದೇಶದಂತೆ ಬಿ12(1)ಪಿಆರ್/202/2022-23

ದಿನಾಂಕ:23-03-2023ರ ಪ್ರಕಾರ 198 ವಾರ್ಡ್‌ಗಳಿಂದ 243 ವಾರ್ಡ್‌ಗಳಿಗೆ ಮಂಜೂರಾತಿ ನೀಡಿ 75 ಉಪ ವಿಭಾಗ ಹೆಚ್ಚುವರಿಯಾಗಿ ಮಂಜೂರಾತಿ ನೀಡಿರುತ್ತಾರೆ. ಪಾಲಿಕೆಯ ಆರೋಗ್ಯ ಇಲಾಖೆಯ ಮತ್ತು ಘನತ್ಯಾಜ್ಯ ನಿರ್ವಹಣೆ ಇಲಾಖೆಯ ಕೆಲಸ ಕಾರ್ಯಗಳನ್ನು ಸುಗಮವಾಗಿ ನಿರ್ವಹಿಸಲು ಹೆಚ್ಚುವರಿ 39 ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಮಾರ್ಪಡಿಸಿ / ತಿದ್ದುಪಡಿ ಮಾಡಿ 36 ಸಂಖ್ಯೆಯಿಂದ 75 ಸಂಖ್ಯೆಯ ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಸೃಜಿಸುವ ಸಂಬಂಧ ಕ್ರಮಕೈಗೊಳ್ಳಬಹುದಾಗಿ ಅಭಿಪ್ರಾಯ ವರದಿ ನೀಡಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಈಗಾಗಲೇ ಪಾಲಿಕೆಯಲ್ಲಿ ಮಂಜೂರಾಗಿರುವ 198 ಹಿರಿಯ ಆರೋಗ್ಯ ಪರಿವೀಕ್ಷಕರ ಹುದ್ದೆಗಳಲ್ಲಿ 36 ಹಿರಿಯ ಆರೋಗ್ಯ ಪರಿವೀಕ್ಷಕರುಗಳ ಹುದ್ದೆಗಳನ್ನು ಹೆಲ್ತ್ ಸೂಪರ್ ವೈಸರ್ ಗ್ರೂಪ್ 'ಬಿ' ಹುದ್ದೆಗೆ ಉನ್ನತೀಕರಿಸಿ, ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆಯ (ಬಿ.ಬಿ.ಎಂ.ಪಿ) ರವರ ಆದೇಶ ಸಂಖ್ಯೆ:ನಅಇ 266 ಎಂಎನ್‌ಯು 2022 ದಿ:24-03-2023ರಂತೆ ಆದೇಶಿಸಲಾಗಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 66 ಬಿಬಿಎಸ್ 2022 ದಿನಾಂಕ: 14-07-2022 ಮತ್ತು ಪಾಲಿಕೆಯ ಮಾನ್ಯ ಮುಖ್ಯ ಆಯುಕ್ತರವರ ಆದೇಶದಂತೆ ಬಿ12(1)ಪಿಆರ್/202/2022-23 ದಿನಾಂಕ:23-03-2023ರ ಪ್ರಕಾರ 198 ವಾರ್ಡ್‌ಗಳಿಂದ 243 ವಾರ್ಡ್‌ಗಳಿಗೆ ಮಂಜೂರಾತಿ ನೀಡಿದ್ದು, ಪಾಲಿಕೆಯಲ್ಲಿ 75 ಉಪ ವಿಭಾಗಗಳು ಇರುವುದರಿಂದ ಪ್ರತಿ ಉಪ ವಿಭಾಗಗಳಿಗೆ ಒಬ್ಬರಂತೆ ಪ್ರಸ್ತುತ ಉನ್ನತೀಕರಿಸಿರುವ 36 ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಹೊರತುಪಡಿಸಿ ಹೆಚ್ಚುವರಿಯಾಗಿ 39 ಹೆಲ್ತ್ ಸೂಪರ್ ವೈಸರ್ ಹುದ್ದೆಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಅಗತ್ಯ ಇರುವ ಹಿನ್ನಲೆಯಲ್ಲಿ ಬಾಕಿ ಉಳಿದಿರುವ 162 ಹಿರಿಯ ಆರೋಗ್ಯ ಪರಿವೀಕ್ಷಕರ ಹುದ್ದೆಗಳಲ್ಲಿ 39 ಹುದ್ದೆಗಳನ್ನು ಹೆಲ್ತ್ ಸೂಪರ್ ವೈಸರ್ ಹುದ್ದೆಗೆ ಉನ್ನತೀಕರಿಸುವ ಸಲುವಾಗಿ ಸರ್ಕಾರದ ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲು ಅನುಮೋದನೆ ಕೋರುತ್ತಾ, ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿ,_ಸಾರ್ವಜನಿಕ ಆರೋಗ್ಯ ಘನತ್ಯಾಜ್ಯ ಮತ್ತು ವಿಪತ್ತು ನಿರ್ವಹಣೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಆಡಳಿತ) ರವರ ದಿನಾಂಕ:30-05-2023ರ ಟಿಪ್ಪಣಿ.

**ತೀರ್ಮಾನ: ವಿಶೇಷ ಆಯುಕ್ತರು (ಆಡಳಿತ) ರವರ ದಿನಾಂಕ: 30-05-2023ರ ಟಿಪ್ಪಣಿಯನ್ನು ಒಪ್ಪಿದೆ.**

(ರಾಕೇಶ್ ಸಿಂಗ್)
ಆಡಳಿತಗಾರರು

# <u>ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: ೦೭- ೦೬ -2023ರ ನಡವಳಿಗಳು</u>

**<u>ವಿಷಯ ಸಂಖ್ಯೆ: 24/2023-24</u>**

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಸಂಖ್ಯೆ:ಸಿಆಸುಇ 7 ಸೇನೌವ 2023 ದಿನಾಂಕ:30-05-2023ರ ಆದೇಶದಲ್ಲಿ 2023-24ನೇ ಸಾಲಿಗೆ ಗ್ರೂಪ್-ಎ, ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ವರ್ಗದ ಅಧಿಕಾರಿ / ನೌಕರರರಿಗೆ ಅನ್ವಯವಾಗುವಂತೆ ಒಂದು ಜೇಷ್ಠತಾ ಘಟಕದಲ್ಲಿ ಕಾರ್ಯನಿರತ ವೃಂದ ಬಲದ ಶೇಕಡಾ 6 ರಷ್ಟನ್ನು ಮೀರದಂತೆ ದಿನಾಂಕ: 01-06-2023 ರಿಂದ ದಿನಾಕ: 15-06-2023ರ ವರೆಗೆ ಸಾರ್ವತ್ರಿಕ ವರ್ಗಾವಣೆ ಕೈಗೊಳ್ಳಲು ಆಯಾ ಇಲಾಖಾ ಸಚಿವರಿಗೆ ಅಧಿಕಾರ ಪ್ರತ್ಯಾಯೋಜಿಸಿ ಆದೇಶಿಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 2016ನೇ ಸಾಲಿನಲ್ಲಿ ಅಂತಿಮವಾಗಿ ಸಾಮಾನ್ಯ ವರ್ಗಾವಣೆ ಪ್ರಕ್ರಿಯೆ ಕೈಗೊಳ್ಳಲಾಗಿದ್ದು, ಆ ನಂತರ ತಹಲ್ ವರೆವಿಗೂ ಸಾಮಾನ್ಯ ವರ್ಗಾವಣೆಯನ್ನು ಮಾಡಿರುವುದಿಲ್ಲ. ಈ ಹಿನ್ನಲೆಯಲ್ಲಿ ಮೇಲ್ಕಂಡ ಸರ್ಕಾರದ ಆದೇಶದಂತೆ ಶೇ.6ರಷ್ಟನ್ನು ಮಾತ್ರ ಸಾಮಾನ್ಯ ವರ್ಗಾವಣೆಗೆ ಪರಿಗಣಿಸಿದಲ್ಲಿ ಹೆಚ್ಚಿನ ಸಂಖ್ಯೆಯ ಅಧಿಕಾರಿ / ನೌಕರರುಗಳು ವರ್ಗಾವಣೆ ಪ್ರಕ್ರಿಯೆಗಳಿಂದ ದೂರ ಉಳಿಯುವ ಸಾಧ್ಯತೆಗಳಿರುತ್ತವೆ. ಆದ್ದರಿಂದ ಪಾಲಿಕೆಯ ಆಡಳಿತಾತ್ಮಕ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಪ್ರತ್ಯೇಕವಾಗಿ ವರ್ಗಾವಣೆ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಬೇಕಾಗಿರುತ್ತದೆ.

ಈಗಾಗಲೇ ಪಾಲಿಕೆಯಲ್ಲಿ ಸಂಖ್ಯೆ:ಬಿ12(5)ಪಿಆರ್/112/19-20 ದಿನಾಂಕ:19-12-2020ರಂತೆ ಅಧಿಕಾರಿ / ನೌಕರರ ವರ್ಗಾವಣೆಗಳ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, ಇದನ್ನು ಪರಿಷ್ಕರಿಸಿ, ಈ ಕೆಳಕಂಡ ರೀತ್ಯಾ ಸಾಮಾನ್ಯ ವರ್ಗಾವಣೆ ಮಾರ್ಗಸೂಚಿಯನ್ನು ಅಳವಡಿಸಿಕೊಳ್ಳಲು ಕ್ರಮ ವಹಿಸಬೇಕಾಗಿರುತ್ತದೆ.

**1) <u>ವರ್ಗಾವಣೆ ಪ್ರಕ್ರಿಯೆ:-</u>**

- **ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್-'ಎ' ವೃಂದದ ಅಧಿಕಾರಿಗಳು (ಈ ವ್ಯಾಪ್ತಿಯಲ್ಲಿ ಬರುವ ಹುದ್ದೆಗಳ ವಿವರಗಳನ್ನು ವಿವರಿಸಿದೆ**

**ಅನುಬಂಧ–1**

**ಗ್ರೂಪ್–ಎ ವೃಂದದ ಹುದ್ದೆಗಳ ಪಟ್ಟಿ**

| ಕ್ರಸಂ. | ಹುದ್ದೆಯ ಪದನಾಮ | ವೃಂದ |
|---|---|---|
| 1. | ಉಪ ಆಯುಕ್ತರು (ವಲಯ) | ಎ |
| 2. | ಉಗ್ರಾಣ ಮತ್ತು ದಸ್ತಾವೇಜು ಅಧಿಕಾರಿ (ಕಂದಾಯ ಅಧಿಕಾರಿ ಶ್ರೇಣಿ) | ಎ |
| 3. | ಉಪ ನಿಯಂತ್ರಕರು (ಹಣಕಾಸು) | ಎ |

| | | |
|---|---|---|
| 4. | ಸಹಾಯಕ ನಿಯಂತ್ರಕರು (ಹಣಕಾಸು) | ಎ |
| 5. | ವಿಶೇಷ ಅಧಿಕಾರಿ (ಉಪ ಕಂದಾಯ ಅಧಿಕಾರಿ ಶ್ರೇಣಿ) | ಎ |
| 6. | ಅಧೀಕ್ಷಕ ಅಭಿಯಂತರರು (ಸಿವಿಲ್) | ಎ |
| 7. | ಅಧೀಕ್ಷಕ ಅಭಿಯಂತರರು (ವಿದ್ಯುತ್) | ಎ |
| 8. | ಕಾರ್ಯಪಾಲಕ ಅಭಿಯಂತರರು (ಸಿವಿಲ್) | ಎ |
| 9. | ಕಾರ್ಯಪಾಲಕ ಅಭಿಯಂತರರು (ವಿದ್ಯುತ್) | ಎ |
| 10. | ಸಹಾಯಕ ಕಾರ್ಯಪಾಲಕ ಅಭಿಯಂತರರು(ಸಿವಿಲ್) ಡಿವಿಜನ್–ಖ&ಖಖ | ಎ |
| 11. | ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಡಿವಿಜನ್–ಖ& ಖಖ | ಎ |
| 12. | ಉಪ ನಿರ್ದೇಶಕರು (ಕಟ್ಟಡ ಪರವಾನಗಿ ಕೋಶ) | ಎ |
| 13. | ಸಹಾಯಕ ನಿರ್ದೇಶಕರು (ಕಟ್ಟಡ ಪರವಾನಗಿ ಕೋಶ) | ಎ |
| 14. | ಉಪ ಅರಣ್ಯ ಸಂರಕ್ಷಣಾಧಿಕಾರಿ | ಎ |
| 15. | ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) | ಎ |
| 16. | ಆರೋಗ್ಯಾಧಿಕಾರಿ (ಕ್ಲಿನಿಕಲ್) | ಎ |
| 17. | ವೈದ್ಯಕೀಯ ಅಧೀಕ್ಷಕರು (ಕ್ಲಿನಿಕಲ್) | ಎ |
| 18. | ಉಪ ಆರೋಗ್ಯಾಧಿಕಾರಿ | ಎ |
| 19. | ಆರೋಗ್ಯ ವೈದ್ಯಾಧಿಕಾರಿ | ಎ |
| 20. | ಸೀನಿಯರ್ ಕೆಮಿಸ್ಟ್ ಮತ್ತು ಪಬ್ಲಿಕ್ ಅನಾಲಿಸ್ಟ್ | ಎ |
| 21. | ಸ್ತ್ರೀರೋಗ ತಜ್ಞರು | ಎ |
| 22. | ಮಕ್ಕಳ ತಜ್ಞರು | ಎ |
| 23. | ಅರವಳಿಕೆ ತಜ್ಞರು | ಎ |
| 24. | ಸಹಾಯಕ ಶಸ್ತ್ರಚಿಕಿತ್ಸಕರು(ಜಿಡಿಎಂಒ) | ಎ |
| 25. | ಅಸಿಸ್ಟೆಂಟ್ ಕೆಮಿಸ್ಟ್ | ಎ |
| 26. | ಉಪ ನಿರ್ದೇಶಕರು (ತೋಟಗಾರಿಕೆ) | ಎ |
| 27. | ಕಂದಾಯ ಅಧಿಕಾರಿ | ಎ |
| 28. | ಉಪ ಕಂದಾಯ ಅಧಿಕಾರಿ | ಎ |
| 29. | ಸಹಾಯಕ ನಿರ್ದೇಶಕರು (ಸಾಂಖ್ಯಿಕ) | ಎ |
| 30. | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ | ಎ |

a) ಒಂದೇ ಹುದ್ದೆಯಲ್ಲಿ ಒಂದು ಸ್ಥಳ / ಕಛೇರಿಯಲ್ಲಿ 02 ವರ್ಷ ಅಥವಾ 02 ವರ್ಷಗಳಿಗೂ ಮಿಗಿಲಾಗಿ ಕಾರ್ಯನಿರ್ವಹಿಸಿರುವ ಅಧಿಕಾರಿಗಳು ಸಾಮಾನ್ಯ ವರ್ಗಾವಣೆಗೆ ಅರ್ಹರಿರುತ್ತಾರೆ.

b) ವರ್ಗಾವಣೆಗೆ ಅರ್ಹರಿರುವ ಅಧಿಕಾರಿಗಳ ಪೈಕಿ ಒಂದೇ ಹುದ್ದೆಯಲ್ಲಿ ಅಥವಾ ವಿವಿಧ ಹುದ್ದೆಗಳಲ್ಲಿ ಒಂದೇ ವಲಯದ ವಿವಿಧ ಸ್ಥಳ / ಕಛೇರಿಗಳಲ್ಲಿ 10 ವರ್ಷಗಳಿಗೂ ಮಿಗಿಲಾಗಿ ಕಾರ್ಯನಿರ್ವಹಿಸಿರುವ ಅಧಿಕಾರಿಗಳು ಕಡ್ಡಾಯವಾಗಿ ಬೇರೆ ವಲಯಗಳಿಗೆ ವರ್ಗಾವಣೆಗೊಳಿಸುವುದು.

c) ವರ್ಗಾವಣೆಗೆ ಅರ್ಹತೆ ಹೊಂದಿರುವ ಅಧಿಕಾರಿಗಳು ಒಂದು ಕಛೇರಿ / ವಲಯದಲ್ಲಿ ನಿರ್ವಹಿಸಿರುವ ಅತಿ ಹೆಚ್ಚು ಸೇವೆಯನ್ನು ಗಣನೆಗೆ ತೆಗೆದುಕೊಂಡು ಪಟ್ಟಿಯನ್ನು ತಯಾರಿಸುವುದು.

• ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್-'ಬಿ' ವೃಂದದ ಅಧಿಕಾರಿಗಳು (ಈ ವ್ಯಾಪ್ತಿಯಲ್ಲಿ ಬರುವ ಹುದ್ದೆಗಳ ವಿವರಗಳನ್ನು ವಿವರಿಸಿದೆ

**ಅನುಬಂಧ-2**

## ಗ್ರೂಪ್-ಬಿ ವೃಂದದ ಹುದ್ದೆಗಳ ಪಟ್ಟಿ

| | | |
|---|---|---|
| 1. | ಲೆಕ್ಕ ಪರಿಶೋಧನಾಧಿಕಾರಿ (ಲೆಕ್ಕಪತ್ರ ಇಲಾಖೆ) | ಬಿ |
| 2. | ಲೆಕ್ಕಾಧೀಕ್ಷಕರು | ಬಿ |
| 3. | ರೆಕಾರ್ಡಿಂಗ್‌ಅಧಿಕಾರಿ | ಬಿ |
| 4. | ಭಾಷಾಂತರಕಾರ | ಬಿ |
| 5. | ಸಹಾಯಕ ವಿದ್ಯಾಧಿಕಾರಿ | ಬಿ |
| 6. | ಉಪನ್ಯಾಸಕರು (ಕಿರಿಯ ಕಾಲೇಜು) | ಬಿ |
| 7. | ಮುಖ್ಯೋಪಾಧ್ಯಾಯರು (ಪ್ರೌಢಶಾಲೆ) | ಬಿ |
| 8. | ವಿಷಯ ಪರಿವೀಕ್ಷಕರು | ಬಿ |
| 9. | ದೈಹಿಕ ಶಿಕ್ಷಣಾಧಿಕಾರಿ | ಬಿ |
| 10. | ಸಹಾಯಕ ಅಭಿಯಂತರರು (ಸಿವಿಲ್) ಡಿವಿಜನ್-ಖ& ಖಖ | ಬಿ |
| 11. | ಸಹಾಯಕ ಅಭಿಯಂತರರು (ವಿದ್ಯುತ್) ಡಿವಿಜನ್-ಖ& ಖಖ | ಬಿ |
| 12. | ಪರಿಸರ ಅಭಿಯಂತರರು | ಬಿ |
| 13. | ಟೌನ್ ಪ್ಲಾನರ್ (ವಿಶೇಷ ದರ್ಜೆ) | ಬಿ |
| 14. | ವಲಯ ಅರಣ್ಯ ಸಂರಕ್ಷಣಾಧಿಕಾರಿ | ಬಿ |
| 15. | ಸಹಾಯಕ ತೋಟಗಾರಿಕೆ ಅಧಿಕಾರಿ | ಬಿ |
| 16. | ಸಹಾಯಕ ಕಂದಾಯ ಅಧಿಕಾರಿ | ಬಿ |
| 17. | ಸಹಾಯಕ ಸಾರ್ವಜನಿಕ ಸಂಪರ್ಕಾಧಿಕಾರಿ | ಬಿ |

a) ಒಂದೇ ಹುದ್ದೆಯಲ್ಲಿ ಒಂದು ಸ್ಥಳ / ಕಛೇರಿಯಲ್ಲಿ 02 ವರ್ಷ ಅಥವಾ 02 ವರ್ಷಗಳಿಗೂ ಮಿಗಿಲಾಗಿ ಕಾರ್ಯನಿರ್ವಹಿಸಿರುವ ಅಧಿಕಾರಿಗಳು ಸಾಮಾನ್ಯ ವರ್ಗಾವಣೆಗೆ ಅರ್ಹರಿರುತ್ತಾರೆ.

b) ವರ್ಗಾವಣೆಗೆ ಅರ್ಹರಿರುವ ಅಧಿಕಾರಿಗಳ ಪೈಕಿ ಒಂದೇ ಹುದ್ದೆಯಲ್ಲಿ ಅಥವಾ ವಿವಿಧ ಹುದ್ದೆಗಳಲ್ಲಿ ಒಂದೇ ವಲಯದ ವಿವಿಧ ಸ್ಥಳ / ಕಛೇರಿಗಳಲ್ಲಿ 10 ವರ್ಷಗಳಿಗೂ ಮಿಗಿಲಾಗಿ ಕಾರ್ಯನಿರ್ವಹಿಸಿರುವ ಅಧಿಕಾರಿಗಳು ಕಡ್ಡಾಯವಾಗಿ ಬೇರೆ ವಲಯಗಳಿಗೆ ವರ್ಗಾವಣೆಗೊಳಿಸುವುದು.

c) ವರ್ಗಾವಣೆಗೆ ಅರ್ಹತೆ ಹೊಂದಿರುವ ಅಧಿಕಾರಿಗಳು ಒಂದು ಕಛೇರಿ / ವಲಯದಲ್ಲಿ ನಿರ್ವಹಿಸಿರುವ ಅತಿ ಹೆಚ್ಚು ಸೇವೆಯನ್ನು ಗಣನೆಗೆ ತೆಗೆದುಕೊಂಡು ಪಟ್ಟಿಯನ್ನು ತಯಾರಿಸುವುದು.

* ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್-'ಸಿ' ವೃಂದದ ಕಾರ್ಯನಿರ್ವಾಹಕ ಸಿಬ್ಬಂದಿಗಳು (ಈ ವ್ಯಾಪ್ತಿಯಲ್ಲಿ ಬರುವ ಹುದ್ದೆಗಳ ವಿವರಗಳನ್ನು ವಿವರಿಸಿದೆ

**ಅನುಬಂಧ-3**

## ಗ್ರೂಪ್-ಸಿ ವೃಂದದ ಕಾರ್ಯನಿರ್ವಾಹಕ ಹುದ್ದೆಗಳ (Executive) ಪಟ್ಟಿ

| | | |
|---|---|---|
| 1. | ಭೂಮಾಪಕರು | ಸಿ |
| 2. | ಕಿರಿಯ ಅಭಿಯಂತರರು (ಸಿವಿಲ್) | ಸಿ |
| 3. | ಕಿರಿಯ ಅಭಿಯಂತರರು (ವಿದ್ಯುತ್) | ಸಿ |
| 4. | ಎಲೆಕ್ಟ್ರಿಷಿಯನ್ | ಸಿ |
| 5. | ಕಿರಿಯ ಆರೋಗ್ಯ ಪರಿವೀಕ್ಷಕರು | ಸಿ |
| 6. | ಉಪ ವಲಯ ಅರಣ್ಯಾಧಿಕಾರಿ | ಸಿ |
| 7. | ಹಿರಿಯ ಆರೋಗ್ಯ ಪರಿವೀಕ್ಷಕರು | ಸಿ |
| 8. | ತೋಟಗಾರಿಕೆ ಸಹಾಯಕ | ಸಿ |
| 9. | ಸಸ್ಯಾಭಿವೃದ್ಧಿಗಾರು | ಸಿ |
| 10. | ಕಂದಾಯ ಮೌಲ್ಯಮಾಪಕರು | ಸಿ |
| 11. | ಕಂದಾಯ ಪರಿವೀಕ್ಷಕರು | ಸಿ |
| 12. | ತೆರಿಗೆ ನಿರೀಕ್ಷಕರು | ಸಿ |

a) ಒಂದೇ ಹುದ್ದೆಯಲ್ಲಿ ಒಂದು ಸ್ಥಳ / ಕಛೇರಿಯಲ್ಲಿ 03 ವರ್ಷ ಅಥವಾ 03 ವರ್ಷಗಳಿಗೂ ಮಿಗಿಲಾಗಿ ಕಾರ್ಯನಿರ್ವಹಿಸಿರುವ ಕಾರ್ಯನಿರ್ವಾಹಕ ಸಿಬ್ಬಂದಿಗಳು ಸಾಮಾನ್ಯ ವರ್ಗಾವಣೆಗೆ ಅರ್ಹರಿರುತ್ತಾರೆ.

b) ವರ್ಗಾವಣೆಗೆ ಅರ್ಹತೆ ಹೊಂದಿರುವ ನೌಕರರುಗಳನ್ನು ಹಾಲಿ ನಿರ್ವಹಿಸುತ್ತಿರುವ ವಿಭಾಗಗಳಿಂದ ಬೇರೆ ವಿಭಾಗಗಳಿಗೆ ಕಡ್ಡಾಯವಾಗಿ ವರ್ಗಾಯಿಸುವುದು.

c) ವರ್ಗಾವಣೆಗೆ ಅರ್ಹರಿರುವ ಅಧಿಕಾರಿಗಳ ಪೈಕಿ ಒಂದೇ ಹುದ್ದೆಯಲ್ಲಿ ಅಥವಾ ವಿವಿಧ ಹುದ್ದೆಗಳಲ್ಲಿ ಒಂದೇ ವಲಯದ ವಿವಿಧ ಸ್ಥಳ / ಕಛೇರಿಗಳಲ್ಲಿ 10 ವರ್ಷಗಳಿಗೂ ಮಿಗಿಲಾಗಿ ಕಾರ್ಯನಿರ್ವಹಿಸಿರುವ ಅಧಿಕಾರಿಗಳು ಕಡ್ಡಾಯವಾಗಿ ಬೇರೆ ವಲಯಗಳಿಗೆ ವರ್ಗಾವಣೆಗೊಳಿಸುವುದು.

d) ವರ್ಗಾವಣೆಗೆ ಅರ್ಹತೆ ಹೊಂದಿರುವ ಅಧಿಕಾರಿಗಳು ಒಂದು ಕಛೇರಿ / ವಲಯದಲ್ಲಿ ನಿರ್ವಹಿಸಿರುವ ಅತಿ ಹೆಚ್ಚು ಸೇವೆಯನ್ನು ಗಣನೆಗೆ ತೆಗೆದುಕೊಂಡು ಪಟ್ಟಿಯನ್ನು ತಯಾರಿಸುವುದು.

- **ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್-'ಸಿ' ವೃಂದದ ಲಿಪಿಕ ಸಿಬ್ಬಂದಿಗಳು (ಈ ವ್ಯಾಪ್ತಿಯಲ್ಲಿ ಬರುವ ಹುದ್ದೆಗಳ ವಿವರಗಳನ್ನು ಅನುಬಂಧ-4ರಲ್ಲಿ ವಿವರಿಸಿದೆ**

**ಅನುಬಂಧ–4**

## ಗ್ರೂಪ್–ಸಿ ವೃಂದದ ಲಿಪಿಕ ಹುದ್ದೆಗಳ (Non Executive) ಪಟ್ಟಿ

| | | |
|---|---|---|
| 1. | ವ್ಯವಸ್ಥಾಪಕರು | ಸಿ |
| 2. | ಶೀಘ್ರಲಿಪಿಗಾರರು | ಸಿ |
| 3. | ಪ್ರಥಮದರ್ಜೆ ಸಹಾಯಕರು | ಸಿ |
| 4. | ದ್ವಿತೀಯದರ್ಜೆ ಸಹಾಯಕರು | ಸಿ |
| 5. | ಲೆಕ್ಕ ಸಹಾಯಕರು (ಬಿ.ಬಿ.ಎಂ.ಪಿ ಲೆಕ್ಕಪತ್ರ ಇಲಾಖೆ) | ಸಿ |
| 6. | ವರದಿಗಾರರು (ಕನ್ನಡ ಮತ್ತುಆಂಗ್ಲ) | ಸಿ |
| 7. | ಆಟದ ಮೈದಾನ ಮೇಲ್ವಿಚಾರಕರು | ಸಿ |
| 8. | ಸಹಾಯಕ ಶಿಕ್ಷಕರು (ಪ್ರೌಢಶಾಲೆ) | ಸಿ |
| 9. | ಕರಕುಶಲ ಶಿಕ್ಷಕರು (ಪ್ರೌಢಶಾಲೆ) | ಸಿ |
| 10. | ಮುಖ್ಯೋಪಾಧ್ಯಾಯರು (ಪ್ರಾಥಮಿಕ ಶಾಲೆ) | ಸಿ |
| 11. | ಚಿತ್ರಕಲಾ ಶಿಕ್ಷಕರು | ಸಿ |
| 12. | ಸಹಾಯಕ ಗ್ರಂಥಪಾಲಕರು | ಸಿ |
| 13. | ಸಹಾಯಕ ಶಿಕ್ಷಕರು (ಪ್ರಾಥಮಿಕ ಶಾಲೆ) | ಸಿ |
| 14. | ದೈಹಿಕ ಶಿಕ್ಷಣಾಧಿಕಾರಿ (ಗ್ರೇಡ್–2) | ಸಿ |
| 15. | ನರ್ಸರಿ ಶಿಕ್ಷಕರು (ನರ್ಸರಿ ಶಾಲೆ / ಅಂಗನವಾಡಿ ಶಿಕ್ಷಕರು) | ಸಿ |
| 16. | ಕ್ರಿಮಿಟೋರಿಯಮ್ಆಪರೇಟರ್ | ಸಿ |
| 17. | ಚಾಲಕರು | ಸಿ |
| 18. | ಹಿರಿಯ ಮಹಿಳಾ ಆರೋಗ್ಯ ಸಹಾಯಕ | ಸಿ |
| 19. | ಶುಶ್ರೂಷಕರು | ಸಿ |
| 20. | ಫಾರ್ಮಾಸಿಸ್ಟ್ | ಸಿ |
| 21. | ಕಿರಿಯ ಮಹಿಳಾ ಆರೋಗ್ಯ ಸಹಾಯಕಿ (ಎಎನ್ಎಂ) | ಸಿ |
| 22. | ಪ್ರಯೋಗಾಲಯ ಶಾಲಾ ತಂತ್ರಜ್ಞರು | ಸಿ |
| 23. | ಉಪ ನೊಂದಣಿಗಾರರು (ಜನನ&ಮರಣ) | ಸಿ |

a) ಸರ್ಕಾರವು ಪ್ರತಿ ವರ್ಷ ಹೊರಡಿಸುವ ವರ್ಗಾವಣೆ ಮಾರ್ಗಸೂಚಿಗಳನ್ವಯ ಸಾಮಾನ್ಯ ವರ್ಗಾವಣೆ ಪ್ರಕ್ರಿಯೆಗಳನ್ನು ಕೈಗೊಳ್ಳುವುದು.

- **ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್-'ಡಿ' ವೃಂದದ ಲಿಪಿಕ ಸಿಬ್ಬಂದಿಗಳು (ಈ ವ್ಯಾಪ್ತಿಯಲ್ಲಿ ಬರುವ ಹುದ್ದೆಗಳ ವಿವರಗಳನ್ನು ಅನುಬಂಧ-5ರಲ್ಲಿ ವಿವರಿಸಿದೆ**

**ಅನುಬಂಧ–5**

## ಗ್ರೂಪ್–ಡಿ ವೃಂದದ ಹುದ್ದೆಗಳ ಪಟ್ಟಿ

| | | |
|---|---|---|
| 1. | ಜಮೇದಾರ್ | ಡಿ |
| 2. | ದಫೇದಾರ್ | ಡಿ |
| 3. | ಪ್ರೋಸಸ್ ಸರ್ವರ್ | ಡಿ |

| | | |
|---|---|---|
| 4. | ಟಪಾಲು ಪ್ರೋಸರ್ಸ್ | ಡಿ |
| 5. | ಟಪಾಲು ಜವಾನರು | ಡಿ |
| 6. | ನಾಲ್ಕನೇ ದರ್ಜೆ ನೌಕರರು | ಡಿ |
| 7. | ಪ್ರಯೋಗ ಶಾಲಾ ಸಹಾಯಕರು | ಡಿ |
| 8. | ಘನತ್ಯಾಜ್ಯ ನಿರ್ವಹಣೆ ದಫೇದಾರ್ | ಡಿ |
| 9. | ಲಿಫ್ಟ್ ಆಪರೇಟರ್ | ಡಿ |
| 10. | ಸಿಮಿಟ್ರಿ ರಿಜಿಸ್ಟ್ರಾರ್ | ಡಿ |
| 11. | ಕೀಟ ಸಂಗ್ರಹಗಾರರು | ಡಿ |
| 12. | ಗ್ಯಾಂಗ್‌ಮ್ಯಾನ್ (ಸೊಳ್ಳೆ ನಿಯಂತ್ರಣ) | ಡಿ |
| 13. | ಆಯಾ | ಡಿ |
| 14. | ತೋಟಗಾರಿಕೆ ಮೇಸ್ತ್ರಿ | ಡಿ |
| 15. | ತೋಟಗಾರರು | ಡಿ |

a) ಒಂದು ಕಛೇರಿಯಲ್ಲಿ 07 ವರ್ಷ / 07 ವರ್ಷಗಳಿಗೂ ಮಿಗಿಲಾಗಿ ಕಾರ್ಯನಿರ್ವಹಿಸಿರುವ ನೌಕರರುಗಳು ಸಾಮಾನ್ಯ ವರ್ಗಾವಣೆಗೆ ಅರ್ಹರಿರುತ್ತಾರೆ.

**2) <u>ಮೇಲ್ಕಂಡಂತೆ ಸಾಮಾನ್ಯ ವರ್ಗಾವಣೆ ಪ್ರಕ್ರಿಯೆ ಕೈಗೊಳ್ಳಲು ಅನುಸರಿಸಬೇಕಾದ ಸಾಮಾನ್ಯ ಷರತ್ತುಗಳು:-</u>**

a) ವರ್ಗಾವಣೆಗೆ ಅರ್ಹರಿರುವ ಅಧಿಕಾರಿ / ಸಿಬ್ಬಂದಿಗಳನ್ನು ಹುದ್ದೆಯಿಂದ ಹುದ್ದೆಗೆ ಮಾತ್ರ ವರ್ಗಾಯಿಸುವುದು.

b) ಖಾಲಿ ಹುದ್ದೆಗಳನ್ನು ಸಾಮಾನ್ಯ ವರ್ಗಾವಣೆಗೆ ಪರಿಗಣಿಸುವಂತಿಲ್ಲ.

c) ವಲಯ ಮಟ್ಟಗಳಲ್ಲಿ ಶೇಕಡವಾರು ಸಾಮಾನ್ಯ ಕಾರ್ಯಶಕ್ತಿಯನ್ನು (Working Strength) ನಿರ್ವಹಣೆ ಮಾಡುವುದು.

d) ಸಾಮಾನ್ಯ ವರ್ಗಾವಣೆ ಪ್ರಕ್ರಿಯೆಯನ್ನು ಪತ್ರಿ ವರ್ಷ ಮೇ ಹಾಗೂ ಜೂನ್ ತಿಂಗಳುಗಳಲ್ಲಿ ಮಾಡತಕ್ಕದ್ದು.

e) ಈ ಮಾರ್ಗಸೂಚಿಯಲ್ಲಿ ವಿವರಿಸಿರುವ ಸಂದರ್ಭ ಹಾಗೂ ವಿಧಾನವನ್ನು ಹೊರತುಪಡಿಸಿ ಯಾವುದೇ ಪಾಲಿಕೆಯ ಅಧಿಕಾರಿ / ನೌಕರರನ್ನು ವರ್ಗಾವಣೆ / ನಿಯೋಜನೆಗೆ ಪರಿಗಣಿಸತಕ್ಕದ್ದಲ್ಲ.

f) ವರ್ಗಾವಣೆ / ನಿಯೋಜನೆಗಳನ್ನು ಮಾಡುವಾಗ ಯಾವುದೇ ಸರ್ಕಾರಿ ನೌಕರನು ಕಡ್ಡಾಯ ನಿರೀಕ್ಷಣೆಯಲ್ಲಿ ಉಳಿಯುವಂತಹ ಸಂದರ್ಭಗಳು ಉಂಟಾಗದಂತೆ ನೋಡಿಕೊಳ್ಳತಕ್ಕದ್ದು.

## 3) ಸಾಮಾನ್ಯ ವರ್ಗಾವಣೆ ಪ್ರಕ್ರಿಯೆಯ ವಿವರಣೆ:-

a) 'ನಿಯೋಜನೆ' ಎಂದರೆ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಸಂಖ್ಯೆ: ನಅಇ 142 ಎಂ.ಎನ್.ಯು 2021, ದಿನಾಂಕ: 07-01-2022ರಂತೆ ಸರ್ಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ಹೊರಡಿಸಿರುವ ನಿಯೋಜನಾ ನೀತಿ / ಮಾರ್ಗಸೂಚಿಗಳನ್ವಯ ನಿಯೋಜಿಸುವಂತಹ ಅಧಿಕಾರಿ / ನೌಕರರುಗಳು.

b) 'ಗುಂಪು-ಎ', 'ಬಿ' 'ಸಿ' ಮತ್ತು 'ಡಿ' ವೃಂದದ ಹುದ್ದೆಗಳು ಎಂದರೆ ಕರ್ನಾಟಕ ನಾಗರೀಕ ಸೇವೆ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 5 ರಡಿ ವರ್ಗೀಕರಿಸಲಾಗಿರುವ ಗುಂಪು-ಎ, ಬಿ, ಸಿ, ಮತ್ತು ಡಿ ವೃಂದದ ಹುದ್ದೆಗಳು:

c) 'ವರ್ಗಾವಣೆ' ಎಂದರೆ ಒಬ್ಬ ಅಧಿಕಾರಿ / ನೌಕರನನ್ನು ಇನ್ನೊಂದು ಹೊಸ ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸಲು ಒಂದು ವಲಯ ವ್ಯಾಪ್ತಿಯ ಕಛೇರಿಯಿಂದ ಇನ್ನೊಂದು ವಲಯ ವ್ಯಾಪ್ತಿಯ ಕಛೇರಿಗೆ ಬದಲಾಯಿಸಿ ಮಾಡುವ ಅಂತರ್‌ವಲಯ ನೇಮಕಾತಿ:

**ಟಿಪ್ಪಣಿ:-**

(ಅ) ಒಬ್ಬ ಅಧಿಕಾರಿ / ನೌಕರನನ್ನು ಒಂದೇ ಕಛೇರಿಯ / ಘಟಕದ ಒಂದು ಹುದ್ದೆಯಿಂದ ಇನ್ನೊಂದು ಹುದ್ದೆಗೆ ಅಥವಾ ಮೇಜಿಗೆ / ವಿಷಯ ಬದಲಾಯಿಸಿ ಚಲನವಲನ ಮಾಡಿದಲ್ಲಿ ಇದನ್ನು ವರ್ಗಾವಣೆ ಎಂದು ಪರಿಗಣಿಸಲು ಬರುವುದಿಲ್ಲ;

(ಆ) ವರ್ಗಾವಣೆಗೆ ಹಾಲಿ ಪಾಲಿಕೆಯಲ್ಲಿರುವ 08 ವಲಯಗಳ ಜೊತೆಗೆ ಕೇಂದ್ರ ಕಛೇರಿ ಆವರಣದಲ್ಲಿರುವ ಕಛೇರಿಗಳನ್ನು ಒಟ್ಟಾಗಿ ಒಂದು ವಲಯವನ್ನಾಗಿ ಪರಿಗಣಿಸುವುದು;

## 4) ಸಕ್ಷಮ ಪ್ರಾಧಿಕಾರದ ವಿವರಗಳು:-

| | |
|---|---|
| ಎ) ಗ್ರೂಪ್-'ಎ' ವೃಂದದ ಅಧಿಕಾರಿಗಳಿಗೆ | - ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ |
| ಬಿ) ಗ್ರೂಪ್-'ಬಿ' 'ಸಿ' ಮತ್ತು 'ಡಿ ವೃಂದದ ಅಧಿಕಾರಿಗಳಿಗೆ | - ವಿಶೇಷ ಆಯುಕ್ತರು (ಆಡಳಿತ), ಬಿ.ಬಿ.ಎಂ.ಪಿ |

## 5) ಸಕ್ಷಮ ಪ್ರಾಧಿಕಾರದ ಜವಾಬ್ದಾರಿಗಳು:-

ವರ್ಗಾವಣೆ / ನಿಯೋಜನೆ ಅಥವಾ ನೇಮಕಾತಿ ಮಾಡುವಾಗ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರನ ವಿರುದ್ಧ ಗಂಭೀರ ಆರೋಪಗಳಿದ್ದಲ್ಲಿ ಹಾಗೂ ಆತನ ವಿರುದ್ಧ ಇಲಾಖಾ ವಿಚಾರಣೆ / ಅಭಿಯೋಜನೆಗೊಳಿಸಲು ಉದ್ದೇಶಿಸಲಾಗಿದ್ದಲ್ಲಿ ಅಂತಹವರಿಗೆ ಸೂಕ್ಷ್ಮ ಹುದ್ದೆಗಳಿಗೆ / ಕಾರ್ಯಕಾರಿ ಹುದ್ದೆಗಳಿಗೆ ನೇಮಿಸದೇ ಅವರು ತಮ್ಮ ವಿರುದ್ಧ ಬಾಕಿಯಿರುವ ತನಿಖೆಯಲ್ಲಿ ಹಸ್ತಕ್ಷೇಪ ಮಾಡಲು ಅವಕಾಶವಿಲ್ಲದಿರುವಂತಹ ಕಾರ್ಯಕಾರಿಯೇತರ (Non-Executive) ಹುದ್ದೆಗಳಿಗೆ ನೇಮಿಸತಕ್ಕದ್ದು. ಮುಂದುವರೆದು, ಇಲಾಖಾ ವಿಚಾರಣೆ ಬಾಕಿಯಿರುವ ಅಧಿಕಾರಿ / ನೌಕರನನ್ನು ಅವನು ಕೋರುವ ಹುದ್ದೆಗೆ ನಿಯೋಜಿಸಬಾರದು.

6) **<u>ಈ ಕೆಳಕಂಡ ಸಂದರ್ಭಗಳನ್ನು ಹೊರತುಪಡಿಸಿ ಸಕ್ಷಮ ಪ್ರಾಧಿಕಾರಗಳು ವರ್ಗಾವಣೆಗಳನ್ನು ಜೂನ್ ತಿಂಗಳ ನಂತರ ಮಾಡತಕ್ಕದ್ದಲ್ಲ:-</u>**

a) ಒಬ್ಬ ಅಧಿಕಾರಿ / ನೌಕರನನ್ನು ಸೇವೆಯಿಂದ ಅಮಾನತ್ತಿನಲ್ಲಿಡುವ ಬದಲು ವರ್ಗಾಯಿಸಲು / ನಿಯೋಜಿಸಲು ಉದ್ದೇಶಿಸಿದಾಗ:

b) ಹೊಸ ಕಛೇರಿ / ಹುದ್ದೆಗಳನ್ನು ಸೃಜಿಸಿದಾಗ ಅಥವಾ ನಿವೃತ್ತಿ, ಬಡ್ತಿ, ರಾಜೀನಾಮೆ, ಹಿಂಬಡ್ತಿ, ವಜಾಗೊಳಿಸುವುದರಿಂದ, ಮರಣದಿಂದ, ಕಡ್ಡಾಯ ನಿವೃತ್ತಿಯ ಕಾರಣದಿಂದ ಹುದ್ದೆಗಳು ತೆರವಾದಾಗ ಅಥವಾ ನೇರ ನೇಮಕಾತಿ ಹೊಂದಿದವರನ್ನು ಮೊದಲು ನೇಮಿಸುವಾಗ ಅಥವಾ ಬಡ್ತಿ ಹೊಂದಿದವರನ್ನು ನೆಮಿಸುವಾಗ ಅಥವಾ ಯಾವುದೇ ಅನಿರೀಕ್ಷಿತ ಪರಿಸ್ಥಿತಿಯಿಂದ ಉದ್ಭವವಾದ ಹುದ್ದೆಗಳನ್ನು ತಕ್ಷಣ ತುಂಬಬೇಕಾದಾಗ:

c) ಪರಸ್ಪರ ವರ್ಗಾವಣೆವನ್ನು ಅಧಿಕಾರಿ / ನೌಕರನ ಸೇವಾವಧಿಯಲ್ಲಿ ಒಂದು ಬಾರಿ ಮಾತ್ರ ನೀಡಬಹುದು: ಮತ್ತು

d) ಯಾವುದೇ ಅಧಿಕಾರಿ / ನೌಕರನ ವಿರುದ್ಧ ಮೋಲ್ನೋಟಕ್ಕೆ ಗಂಭೀರ ಸ್ವರೂಪದ ದೂರಿರುವ ಪ್ರಕರಣಗಳಲ್ಲಿ ಮೋಲ್ನೋಟಕ್ಕೆ ಆರೋಪವಿದೆಯೆಂದು ಬಗ್ಗೆ ಇಲಾಖಾ ಮುಖ್ಯಸ್ಥರು ಅಭಿಪ್ರಾಯಪಟ್ಟಲ್ಲಿ ಅಂತಹ ಪ್ರಕರಣಗಳಲ್ಲಿ ಅಧಿಕಾರಿ / ನೌಕರನಿಗೆ ದೋಷಾರೋಪಣೆ ಪಟ್ಟಿ ಜಾರಿಯಾಗಿರುವುದು ಅಥವಾ ಸಕ್ಷಮ ನ್ಯಾಯಾಲಯದಲ್ಲಿ ಅಧಿಕಾರಿಯನ್ನು ಅಭಿಯೋಜಿಸುವ ಬಗ್ಗೆ ಅನುಮತಿ ನೀಡುರುವುದು ಖಚಿತವಾದ ಪ್ರಕರಣಗಳಲ್ಲಿ.

7) **<u>ಒಂದು ಸ್ಥಳದಲ್ಲಿರಬಹುದಾದ ಕನಿಷ್ಠ ಅವಧಿ:-</u>**

ಒಂದು ಸ್ಥಳದಲ್ಲಿ ಒಂದು ಹುದ್ದೆಯಲ್ಲಿ ಈ ಕೆಳಗೆ ಸೂಚಿಸಿರುವ ಸೇವಾವಧಿಯನ್ನು ಪೂರ್ಣಗೊಳಿಸದೆ ಯಾವುದೇ ಸರ್ಕಾರಿ ನೌಕರನನ್ನು ಸಾಧಾರಣವಾಗಿ ವರ್ಗಾವಣೆ / ನಿಯೋಜನೆ ಮಾಡುವಂತಿಲ್ಲ:-

| **ಕ್ರಮ ಸ** | **ವೃಂದ** | **ಸೇವಾವಧಿ (ವರ್ಷಗಳು)** |
|---|---|---|
| 1. | ಗ್ರೂಪ್-'ಎ' ವೃಂದದ ಅಧಿಕಾರಿಗಳು | 02 ವರ್ಷಗಳು |
| 2. | ಗ್ರೂಪ್-'ಬಿ' ವೃಂದದ ಅಧಿಕಾರಿ / ಸಿಬ್ಬಂದಿಗಳು | 02 ವರ್ಷಗಳು |
| 3. | ಗ್ರೂಪ್-'ಸಿ' ವೃಂದದ ಸಿಬ್ಬಂದಿಗಳು (ಕಾರ್ಯನಿರ್ವಾಹಕ) | 03 ವರ್ಷಗಳು |
| 4. | ಗ್ರೂಪ್-'ಸಿ' ವೃಂದದ ಸಿಬ್ಬಂದಿಗಳು (ಲಿಪಿಕ) | ಸರ್ಕಾರದ ನಿರ್ದೇಶನದನುಸಾರ |
| 5. | ಗ್ರೂಪ್-'ಡಿ' ವೃಂದದ ಸಿಬ್ಬಂದಿಗಳು | 07 ವರ್ಷಗಳು |

8) <u>ಅವಧಿ ಪೂರ್ವ / ಅವಧಿ ಮೀರಿದ ವರ್ಗಾವಣೆಗಳು :-</u>

a) ಸಾಮಾನ್ಯವಾಗಿ ಅವಧಿಪೂರ್ವ ವರ್ಗಾವಣೆಗಳನ್ನು ಮಾಡತಕ್ಕದಲ್ಲ. ಈ ಕೆಳಕಂಡ ಸಂದರ್ಭಗಳಲ್ಲಿ ಸಕ್ಷಮ ಪ್ರಾಧಿಕಾರವು ಲಿಖಿತವಾಗಿ ಕಾರಣಗಳನ್ನು ದಾಖಲಿಸಿ ಅಧಿಕಾರಿ / ನೌಕರನು ಒಂದು ಸ್ಥಳದಲ್ಲಿರಬಹುದಾದ ಸೇವಾವಧಿಯನ್ನು ವಿಸ್ತರಿಸಬಹುದು ಅಥವಾ ಕಡಿತಗೊಳಿಸಬಹುದು ಪ್ರಸ್ತುತ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸಲು ಯಾವುದೇ ಅಧಿಕಾರಿ / ನೌಕರನು (ಅವನು ಅಥವಾ ಅವಳು) ಸೂಕ್ತವಾಗಿರುವುದಿಲ್ಲವೆಂದು ಸಕ್ಷಮ ಪ್ರಾಧಿಕಾರಿಗೆ ಅನಿಸಿದಲ್ಲಿ, ಕಂಡಿಕೆ 8ರಲ್ಲಿ ತಿಳಿಸಲಾಗಿರುವ ಕನಿಷ್ಠ ಅವಧಿಯನ್ನು ಕಡಿತಗೊಳಿಸಿ ಸಂಬಂಧಿಸಿದ ಅಧಿಕಾರಿ / ನೌಕರರನ್ನು ಅವಧಿ ಪೂರ್ವ ವರ್ಗಾಯಿಸಬಹುದಾಗಿದ್ದು, ಈ ಬಗ್ಗೆ ಕಾರಣಗಳನ್ನು ಲಿಖಿತವಾಗಿ ದಾಖಲಿಸುವುದು.

i. ಒಂದು ಸ್ಥಳದಲ್ಲಿರಬಹುದಾದ ಗರಿಷ್ಟ ಅವಧಿಯನ್ನು ಪೂರ್ಣಗೊಳಿಸಿ ವರ್ಗಾವಣೆಗೆ ಅರ್ಹನಿರುವ ಅಧಿಕಾರಿ / ನೌಕರನಿಗೆ ನಿವೃತ್ತನಾಗಲು ಎರಡು ವರ್ಷಕ್ಕಿಂತ ಕಡಿಮೆ ಸೇವಾವಧಿ ಇದ್ದಲ್ಲಿ.

ii. ಒಬ್ಬ ಅಧಿಕಾರಿ / ನೌಕರನು ವಿಶೇಷ ತಾಂತ್ರಿಕ ವಿದ್ಯಾರ್ಹತೆ ಅಥವಾ ಅನುಭವ ಹೊಂದಿದ್ದು, ಅಂತಹ ನಿರ್ದಿಷ್ಟವಾದ ಹುದ್ದೆಗೆ ತಕ್ಷಣಕ್ಕೆ ನೇಮಿಸಲು ಸೂಕ್ತವಾದ ಬದಲಿ ನೌಕರನು ಲಭ್ಯವಿಲ್ಲದಿದ್ದಲ್ಲಿ;

iii. ಪತಿ-ಪತ್ನಿಯರಿಬ್ಬರೂ ಸರ್ಕಾರಿ ನೌಕರರಾಗಿದ್ದು, ಇವರಲ್ಲಿ ಒಬ್ಬರು ವರ್ಗಾವಣೆಗೊಂಡಲ್ಲಿ ಆಗ ಇನ್ನೊಬ್ಬರು ಹಾಲಿಯಿರುವ ಸ್ಥಳದಲ್ಲಿ ಕನಿಷ್ಟ ಸೇವಾವಧಿಯನ್ನು ಪೂರೈಸಿರದಿದ್ದರೂ ಖಾಲಿ ಹುದ್ದೆಯ ಲಭ್ಯತೆಗೊಳಪಟ್ಟು ಆ ಸ್ಥಳಕ್ಕೆ ಅಥವಾ ಹತ್ತಿರವಿರುವ ಸ್ಥಳಕ್ಕೆ ವರ್ಗಾಯಿಸಲು;

iv. ಮಹಿಳಾ ಅಧಿಕಾರಿ / ನೌಕರರು ವಿಧವೆ / ಅವಿವಾಹಿತೆ / ವಿಚ್ಛೇದನ ಪಡೆದ ಅವಿವಾಹಿತೆಯಾದಲ್ಲಿ, ಇವರನ್ನು ವರ್ಗಾಯಿಸಬಹುದು ಹಾಗೂ ಒಂದು ವೇಳೆ ಇವರಿಗೆ ಮೊದಲನೆ ಬಾರಿ ನೇಮಕಾತಿ ಮಾಡಲಾಗುತ್ತಿದ್ದರೆ ಆಕೆಯನ್ನು ಖಾಲಿ ಹುದ್ದೆಯ ಲಭ್ಯತೆಗೊಳಪಟ್ಟು ಆಕೆಯ ಆಯ್ಕೆಯ ಸ್ಥಳಕ್ಕೆ ನೇಮಕಾತಿ ಮಾಡಬಹುದು;

v. ಒಂದು ವೇಳೆ ಅಧಿಕಾರಿ / ನೌಕರನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಂಘದ ಪದಾಧಿಕಾರಿಯಾಗಿದ್ದಲ್ಲಿ ಮಾತ್ರ ಅಂತಹ ನೌಕರರನ್ನು ಆ ಪದಾಧಿಕಾರದ ಅವಧಿ ಮುಗಿಯುವವರೆಗೆ ವರ್ಗಾಯಿಸಬಾರದು ಒಂದು ವೇಳೆ ಪದಾಧಿಕಾರದ ಅವಧಿ ಮುಗಿದ ನಂತರ 3 ತಿಂಗಳಲ್ಲಿ ಚುನಾವಣೆಗಳು ನಡೆಯದಿದ್ದಲ್ಲಿ ಅಂತಹವರನ್ನು ವರ್ಗಾಯಿಸಬಹುದು. ಒಂದು ವೇಳೆ ಅವನು ಮರುಚುನಾಯಿತನಾದಲ್ಲಿ, ಎರಡನೇ ಅವಧಿಯವರೆಗೆ ಮಾತ್ರ ಆತನನ್ನು ಮುಂದುವರಿಸಬಹುದು;

vi. ಅಧಿಕಾರಿ / ನೌಕರರು ಅಂಗವಿಕಲರಾಗಿದ್ದಲ್ಲಿ ವೈದ್ಯಕೀಯ ಪ್ರಮಾಣ ಪತ್ರ ಪಡೆಯುವ ಷರತ್ತಿನ ಮೇರೆಗೆ;

vii. ಅಧಿಕಾರಿ / ನೌಕರ ಅಥವಾ ಆತನ / ಆಕೆಯ ಅಥವಾ ಮಕ್ಕಳು ಯಾವುದೇ ಗಂಭೀರ ಅಥವಾ ಮಾರಕ ಕಾಯಿಲೆಗಳಿಂದ ಬಳಲುತ್ತಿದ್ದಲ್ಲಿ ಒಂದು ಸ್ಥಳದಲ್ಲಿ ಆ ವೈದ್ಯಕೀಯ

ಚಿಕಿತ್ಸಾ ಸೌಲಭ್ಯವು ಲಭ್ಯವಿದ್ದು ಈ ಬಗ್ಗೆ ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರ ಪಡೆದಲ್ಲಿ;

a) ಆದರೆ ಯಾವುದೇ ರೀತಿಯ ಅವಧಿ ಪೂರ್ವ ವರ್ಗಾವಣೆಗಳನ್ನು ಹಾಗೂ ಸಾಮಾನ್ಯ ವರ್ಗಾವಣಾ ಅವಧಿ ಮುಗಿದ ನಂತರ ಯಾವುದೇ ವರ್ಗಾವಣೆಗಳನ್ನು ಮತ್ತು ಮೇಲೆ ತಿಳಿಸಿರುವಂತೆ ಅಧಿಕಾರಿ / ನೌಕರನು ಒಂದು ಸ್ಥಳದಲ್ಲಿರಬಹುದಾದ ಅವಧಿ ವಿಸ್ತರಿಸಿ, ಮಾಡುವ ವರ್ಗಾವಣೆಗಳನ್ನು ಮಾಡುವ ಮುನ್ನ ಮಾನ್ಯ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರ ಅನುಮೋದನೆಯನ್ನು ತಪ್ಪದೇ ಪಡೆಯತಕ್ಕದ್ದು.

## 9) <u>ಖಾಲಿ ಹುದ್ದೆಗಳ ಸಮತೋಲನ:-</u>

a) ಈ ಆದೇಶದಲ್ಲಿ ವ್ಯತಿರಿಕ್ತವಾಗಿ ಏನೇ ಒಳಗೊಂಡಿದ್ದರೂ ಯಾವುದೇ ಒಂದು ವಲಯದಲ್ಲಿ ಯಾವುದೇ ಇಲಾಖೆಯ ಯಾವುದೇ ವೃಂದದಲ್ಲಿರುವ ಖಾಲಿ ಹುದ್ದೆಗಳ ಸಂಖ್ಯೆಯು ಅನುಪಾತರಹಿತವಾಗಿ ಹೆಚ್ಚಾಗಿದ್ದಲ್ಲಿ, ಸಕ್ಷಮ ಪ್ರಾಧಿಕಾರಗಳು ಸಾಧ್ಯವಾದಷ್ಟು ಮಟ್ಟಿಗೆ ಖಾಲಿ ಹುದ್ದೆಗಳು ವಿವಿಧ ವಲಯ / ಇಲಾಖೆ / ಕಛೇರಿಗಳಿಗೆ ಸಮನಾಗಿ ಹಂಚಿಕೆಯಾಗಿರುವಂತೆ ನೋಡಿಕೊಳ್ಳತಕ್ಕದ್ದು;

b) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ವೃಂದಗಳ ಹುದ್ದೆಗಳಿಗೆ ವಿವಿಧ ಇಲಾಖೆಗಳಿಂದ ಎರವಲು ಸೇವೆಯ ಮೇಲೆ ಸರ್ಕಾರದಿಂದ ನಿಯೋಜನಾ ನೀತಿಯಡಿ ನಿಯೋಜಿಸಲ್ಪಡುವ ಅಧಿಕಾರಿ/ನೌಕರರನ್ನು ಕಡ್ಡಾಯವಾಗಿ ಖಾಲಿ ಹುದ್ದೆಗಳ ಎದುರಾಗಿ ಮಾತ್ರ ನೇಮಿಸತಕ್ಕದ್ದು.

## <u>ವರ್ಗಾವಣೆಗಳ ಬಗ್ಗೆ ರಾಜಕೀಯ ಒತ್ತಡವನ್ನು ತರುವುದು.;-</u>

ಅಧಿಕಾರಿ / ನೌಕರನು ವರ್ಗಾವಣೆಯನ್ನು ಹಕ್ಕೆಂದು ಪ್ರತಿಪಾದಿಸುವಂತಿಲ್ಲ. ವರ್ಗಾವಣೆಗಳ ಬಗ್ಗೆ ರಾಜಕೀಯ ಒತ್ತಡವನ್ನು ತರುವುದನ್ನು ನಿಷೇಧಿಸಲಾಗಿದೆ. ಯಾವುದೇ ಅಧಿಕಾರಿ / ನೌಕರನು ತನ್ನನ್ನು ಯಾವುದೇ ನಿರ್ದಿಷ್ಟವಾದ ಹುದ್ದೆಗೆ ವರ್ಗಾಯಿಸುವ ಬಗ್ಗೆ ಸುತ್ತೋಲೆ ಸಂಖ್ಯೆ: ಸಿಆಸುಇ 26 ಸೇನೌವ 93, ದಿನಾಂಕ: 22.05.1993, ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 41 ಎಸ್‌ಟಿಆರ್ 94, ದಿನಾಂಕ: 19.12.1994ರ ಸೂಚನೆಗಳನ್ನು ಉಲ್ಲಂಘಿಸಿ ರಾಜಕೀಯ ಒತ್ತಡ ತಂದಲ್ಲಿ ಆತನ ವಿರುದ್ಧ ಮೇಲ್ಕಂಡ ಸುತ್ತೋಲೆಗಳಲ್ಲಿ ಸೂಚಿಸಿರುವಂತೆ ಕ್ರಮ ತೆಗೆದುಕೊಳ್ಳತಕ್ಕದ್ದು, ಅಂತಹ ನೌಕರನನ್ನು ಕೋರಿದ ಸ್ಥಳಕ್ಕೆ ವರ್ಗಾವಣೆಗೊಳ್ಳದಂತೆ ನೋಡಿಕೊಳ್ಳತಕ್ಕದ್ದು.

## 10) <u>ಸಕ್ಷಮ ಪ್ರಾಧಿಕಾರದ ತೀರ್ಮಾನಗಳ ಬಗ್ಗೆ ಮೇಲ್ಮನವಿ;-</u>

a) ಅಧಿಕಾರಿ / ನೌಕರನು ವರ್ಗಾವಣೆ ಆದೇಶ ಪಡೆದ ಒಂದು ವಾರದೊಳಗೆ ವರ್ಗಾವಣಾ ಆದೇಶದ ಪ್ರತಿಯೊಡನೆ ವರ್ಗಾವಣೆ ಆದೇಶವನ್ನು ಮಾರ್ಪಡಿಸಲು ಕಾರಣಗಳನ್ನು ನಮೂದಿಸಿ ಮೇಲ್ಮನವಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಬಹುದು;

b) ಮೇಲ್ಮನವಿ ಪ್ರಕರಣದ ಎಲ್ಲ ಸನ್ನಿವೇಶಗಳನ್ನು ಪರಿಗಣಿಸಿ ಈ ಆದೇಶದ ಸೂಚನೆಗಳನ್ನು ಪಾಲಿಸಿ ಸೂಕ್ತವಾದ ಆದೇಶಗಳನ್ನು ಹೊರಡಿಸುವುದು.

11) <u>ಮೇಲ್ಮನವಿ ಪ್ರಾಧಿಕಾರ:-</u>

ಎ) ಗ್ರೂಪ್-'ಎ' ವೃಂದದ ಅಧಿಕಾರಿಗಳಿಗೆ - ಸರ್ಕಾರದ ನಗರಾಭಿವೃದ್ಧಿ ಇಲಾಖೆ
ಬಿ) ಗ್ರೂಪ್-'ಬಿ' 'ಸಿ' ಮತ್ತು 'ಡಿ ವೃಂದದ ಅಧಿಕಾರಿಗಳಿಗೆ - ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಈಗಾಗಲೇ ಪಾಲಿಕೆಯಲ್ಲಿ ಅಧಿಕಾರಿ / ನೌಕರರ ವರ್ಗಾವಣೆಗಳ ಬಗ್ಗೆ ಪಾಲಿಕೆ ಸುತ್ತೋಲೆ ಸಂಖ್ಯೆ:ಬಿ12(5)ಪಿಆರ್/112/19-20 ದಿನಾಂಕ:19-12-2020ರಂತೆ ಹೊರಡಿಸಲಾಗಿರುವ ಮಾರ್ಗಸೂಚಿಗಳನ್ನು ಮೇಲ್ಕಂಡಂತೆ ಪರಿಷ್ಕರಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಪ್ರತ್ಯೇಕವಾಗಿ ಸಾಮಾನ್ಯ ವರ್ಗಾವಣೆ ಮಾರ್ಗಸೂಚಿಗಳನ್ನು ರಚಿಸುವ ಬಗ್ಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ ಕೋರುತ್ತಾ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನುಚಲಾಯಿಸಿ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಆಡಳಿತ) ರವರ ದಿನಾಂಕ: 02-06-2023 ರ ಟಿಪ್ಪಣಿ.

**ತೀರ್ಮಾನ: ವಿಶೇಷ ಆಯುಕ್ತರು (ಆಡಳಿತ)ರವರ ದಿನಾಂಕ: 02–06–2023ರ ಟಿಪ್ಪಣಿಯನ್ನು ಒಪ್ಪಿದೆ.**

(ರಾಕೇಶ್ ಸಿಂಗ್)
ಆಡಳಿತಗಾರರು

## ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:೦೭ - ೦೬ - 2023ರ ನಡವಳಿಗಳು

**ವಿಷಯ ಸಂಖ್ಯೆ: 23 /2023-24**

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ 32 ಮತ್ತು 68 ರಡಿಯಲ್ಲಿ ಸರ್ಕಾರಿ ಅಧಿಕಾರಿ/ನೌಕರರನ್ನು ಸ್ವತಂತ್ರ ಪ್ರಭಾರದಲ್ಲಿ ಅಥವಾ ತಮ್ಮ ಹುದ್ದೆಯ ಕರ್ತವ್ಯದ ಜೊತೆ ಬೇರೊಂದು ಹುದ್ದೆಯಲ್ಲಿ ಹೆಚ್ಚಿನ ಪ್ರಭಾರದಲ್ಲಿರಿಸಿದ ಸಂದರ್ಭದಲ್ಲಿ ಅಂತಹ ಪ್ರಭಾರದಲ್ಲಿರಿಸಿದ ಅಧಿಕಾರಿಯ ಮೂಲ ವೇತನದ ಶೇಕಡ 15 (ಶೇಕಡ ಹದಿನೈದು) ರ ದರದಲ್ಲಿ ಪ್ರಭಾರ ಭತ್ಯೆಯನ್ನು ನಿಗಧಿಪಡಿಸಿ ಆದೇಶಿಸಲಾಗಿದೆ. ಪ್ರಭಾರ ಭತ್ಯೆಯನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಈ ಕೆಳಕಂಡ ಅಂಶಗಳನ್ನು ಪರಿಗಣಿಸತಕ್ಕದ್ದು;

ಅ) ಪ್ರಭಾರ ಭತ್ಯೆಯನ್ನು ಪ್ರತಿ ಮಾಸಿಕ ವೇತನ ಬಿಲ್ಲಿನೊಂದಿಗೆ ಪಾವತಿಸತಕ್ಕದ್ದು.

ಆ) ಪ್ರಭಾರ ಭತ್ಯೆಯನ್ನು ಪ್ರಭಾರದಲ್ಲಿರಿಸಿದ ಹುದ್ದೆಗೆ ಸಂಬಂಧಪಟ್ಟ DDO ಅಥವಾ ವರದಿ ಪ್ರಾಧಿಕಾರವು (Reporting Authority) ಯಾವುದು ಉನ್ನತವೋ ಅಂತಹ ಅಧಿಕಾರಿ ಮಂಜೂರು ಮಾಡತಕ್ಕದ್ದು.

ಇ) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ನೇಮಿಸಲಾಗುವ ಇಲಾಖಾ ಮುಖ್ಯಸ್ಥರ ಹಂತದಲ್ಲಿನ ಪ್ರಭಾರದ ಸಂದರ್ಭದಲ್ಲಿ ಪ್ರಭಾರ ಭತ್ಯೆಯನ್ನು ಮಂಜೂರು ಮಾಡಲು/ಡ್ರಾ ಮಾಡಲು ಇಲಾಖಾ ಮುಖ್ಯಸ್ಥರು ಸಕ್ಷಮರಾಗಿರುತ್ತಾರೆ.

ಈ) ಸಚಿವಾಲಯದ ಅಧಿಕಾರಿ/ಸಿಬ್ಬಂದಿಗಳಿಗೆ ಸಂದರ್ಭಾನುಸಾರ ಸಿ.ಆ.ಸು. ಇಲಾಖೆ (ಲೆಕ್ಕಪತ್ರ)/ಐ.ಆರ್.ಎಲ್.ಎ. ಶಾಖೆಗಳಿಂದ ಮಾಸಿಕ ಬಿಲ್ ಗಳೊಂದಿಗೆ ಪ್ರಭಾರ ಭತ್ಯೆಯನ್ನು ಸೆಳೆದು ಪಾವತಿಸತಕ್ಕದ್ದು.

ಉ) ಪ್ರಭಾರ ಭತ್ಯೆಯ ಪರಿಷ್ಕೃತ ದರಗಳು ದಿನಾಂಕ:01-09-2022 ರಿಂದ ಜಾರಿಗೆ ಬರತಕ್ಕದ್ದು. ಪ್ರಸ್ತುತ ಇತ್ಯರ್ಥವಾಗದಿರುವ ಪ್ರಭಾರ ಭತ್ಯೆಯ ಕ್ಲೇಮುಗಳನ್ನು ಮೇಲಿನ ವಿಧಾನದಂತೆ ಇತ್ಯರ್ಥಪಡಿಸತಕ್ಕದ್ದು.

ಉಳಿದಂತೆ, ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ 32 ಮತ್ತು 68 ರ ಎಲ್ಲಾ ಷರತ್ತು ಮತ್ತು ಉಪಬಂಧಗಳು ಅನ್ವಯವಾಗಲಿದೆ. ಎಂದು ಸರ್ಕಾರಿ ಆದೇಶ ಸಂಖ್ಯೆ: ಎಫ್ ಡಿ 14(ಇ) ಎಸ್ ಆರ್ ಎಸ್ 2022, ಬೆಂಗಳೂರು, ದಿನಾಂಕ: 23/09/2022 ರಲ್ಲಿ ತಿಳಿಸಿರುತ್ತಾರೆ.

ಆದುದರಿಂದ ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ 14 (ಇ) ಎಸ್.ಆರ್.ಎಸ್. 2022 ದಿನಾಂಕ:23-09-2022ರ ಆದೇಶವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಸಂಬಂಧ ಅನುಮೋದನೆ ಕೋರುತ್ತಾ, ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಆಡಳಿತ) ರವರ ದಿನಾಂಕ: 01-06-2023ರ ಟಿಪ್ಪಣಿ.

**ತೀರ್ಮಾನ :** ವಿಶೇಷ ಆಯುಕ್ತರು (ಆಡಳಿತ) ರವರ ದಿನಾಂಕ: 01-06-2023ರ ಟಿಪ್ಪಣಿಯನ್ನು ಒಪ್ಪಿದೆ.

(ರಾಕೇಶ್ ಸಿಂಗ್)
ಆಡಳಿತಗಾರರು

## ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ, ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 12 – 06 –2023ರ ನಡವಳಿಗಳು

**ವಿಷಯ ಸಂಖ್ಯೆ: 09 /2023-24**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕೆ.ಎಂ.ಸಿ ಕಾಯ್ದೆ– 1976 ರನ್ವಯ ಪಾಲಿಕೆಯ ಅಂದಿನ ಮಾನ್ಯ ಆಡಳಿತಗಾರರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಕೈಗೊಂಡ ನಿರ್ಣಯದ ವಿಷಯದ ಸಂಖ್ಯೆ: 167/2015–16, ದಿನಾಂಕ: 25–08–2015 ರನ್ವಯ ಮಾನ್ಯ ಆಯುಕ್ತರು ಪಾಲಿಕೆ ವ್ಯಾಪ್ತಿಯಲ್ಲಿನ ನಿವೇಶನಗಳಲ್ಲಿ ಅಭಿವೃದ್ಧಿಗಳಿಗೆ ನೀಡಲಾಗುತ್ತಿರುವ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರದ ಅನುಮತಿ / ಪರವಾನಗಿಗಳಿಗೆ ಸಂಬಂಧಿಸಿದಂತೆ ಅಗತ್ಯ ಶುಲ್ಕಗಳನ್ನು ಪಾವತಿಸಿಕೊಳ್ಳಲು ಸಂಖ್ಯೆ:ಹೆನಿನಯೋ/ ಜೆಡಿ(ಉ)/ಡಿಎಂ3/ಪಿಆರ್/320/2015–16, ದಿನಾಂಕ:04–09–2015 ರಂದು ಸುತ್ತೋಲೆಯನ್ನು ಹೊರಡಿಸಿ ಸ್ವತ್ತಿನ ಮಾರ್ಗಸೂಚಿ ದರಗಳನ್ವಯ ಪಾವತಿಸಿಕೊಳ್ಳಲು ಆದೇಶಿಸಲಾಗಿರುತ್ತದೆ.

ಪಾಲಿಕೆಯ ಸುತ್ತೋಲೆ ಸಂಖ್ಯೆ:ಹೆನಿನಯೋ/ಜೆಡಿ(ಉ)/ಡಿಎಮ್3/ಪಿಆರ್/320/15–16 ದಿನಾಂಕ: 04.09.2015ರ ಸುತ್ತೋಲೆಯನ್ವಯ ಪಾಲಿಕೆ ವ್ಯಾಪ್ತಿಯ ನಗರದ ಆರೋಗ್ಯಕರ ಬೆಳವಣಿಗೆಗೆ / ಅಭಿವೃದ್ಧಿಗೆ ನಿಯಮಾವಳಿಯಂತೆ ಅಭಿವೃದ್ಧಿಗಳಿಗೆ ನೀಡಲಾಗುತ್ತಿರುವ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರದ ಅನುಮತಿ / ಪರವಾನಗಿಗಳಿಗೆ ಸಂಬಂಧಿಸಿದಂತೆ ಅಗತ್ಯ ಶುಲ್ಕಗಳನ್ನು ವಿಧಿಸಲಾಗುತ್ತಿರುತ್ತದೆ. ಸ್ವತ್ತಿನ ಮಾರ್ಗಸೂಚಿ ದರದ ಆಧಾರದ ಮೇಲೆ ಶುಲ್ಕಗಳನ್ನು ವಿಧಿಸಲಾಗುತ್ತಿರುವುದರಿಂದ, ವಿಧಿಸುತ್ತಿರುವ ಶುಲ್ಕವು ಹೆಚ್ಚಾಗಿರುವುದಾಗಿ ಸ್ವತ್ತಿನ ಮಾಲೀಕರು / ಅಭಿವೃದ್ಧಿದಾರರುಗಳು ಘನ ಉಚ್ಚ ನ್ಯಾಯಾಲಯದಲ್ಲಿ ಸದರಿ ಶುಲ್ಕಗಳನ್ನು ಪ್ರಶ್ನಿಸಿ ಹಲವಾರು ರಿಟ್ ಅರ್ಜಿಗಳನ್ನು ದಾಖಲಿಸಿ, ನೆಲಬಾಡಿಗೆ, ಪರವಾನಗಿ ಶುಲ್ಕ, ಪರಿಶೀಲನಾ ಶುಲ್ಕ, ಭದ್ರತಾ ಠೇವಣಿ ಮತ್ತು ಕಾರ್ಮಿಕ ಸೆಸ್‌ಗೆ ಸಂಬಂಧಿಸಿದಂತೆ ತಡೆಯಾಜ್ಞೆಗಳನ್ನು ತಂದು, ಘನ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದನ್ವಯ ಉಳಿಕೆ ಶುಲ್ಕಗಳನ್ನು ಪಾವತಿಸಿ ಅನುಮತಿ / ಪರವಾನಗಿಗಳನ್ನು ಪಡೆದುಕೊಳ್ಳುತ್ತಿರುತ್ತಾರೆ.

ಪಾಲಿಕೆ ವ್ಯಾಪ್ತಿಯಲ್ಲಿ ವ್ಯಾಪ್ತಿಯಲ್ಲಿನ ನಿವೇಶನಗಳಲ್ಲಿ ಅಭಿವೃದ್ಧಿಗಳಿಗೆ ನೀಡಲಾಗುತ್ತಿರುವ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರದ ಅನುಮತಿ/ ಪರವಾನಗಿಗಳಿಗೆ ಸಂಬಂಧಿಸಿದಂತೆ ವಿಧಿಸುತ್ತಿರುವ ಶುಲ್ಕಗಳಿಗೆ ಸಂಬಂಧಿಸಿದಂತೆ ಘನ ಉಚ್ಚ ನ್ಯಾಯಾಲಯದಲ್ಲಿ ಹಲವಾರು ರಿಟ್ ಅರ್ಜಿಗಳು ದಾಖಲಾಗಿದ್ದು, ಘನ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಆದೇಶ ಸಂಖ್ಯೆ 4601/2020 (ಎಲ್.ಬಿ–ಬಿ.ಎಂ.ಪಿ), ಮತ್ತು ಇನ್ನಿತರೆ ರಿಟ್ ಅರ್ಜಿಗಳಿಗೆ ಸಂಬಂಧಿಸಿದಂತೆ ದಿನಾಂಕ: 04–08–2021 ರಂದು ಅಂತಿಮ ಆದೇಶವನ್ನು ನೀಡಿ ಪಾಲಿಕೆಯಿಂದ ಸಂಖ್ಯೆ:ಹೆನಿನಯೋ/ಜೆಡಿ(ಉ)/ಡಿಎಮ್3/ ಪಿಆರ್/320/15–16 ದಿನಾಂಕ:04.09.2015ರಂತೆ ರಂತೆ ಹೊರಡಿಸಿರುವ ಸುತ್ತೋಲೆಯನ್ವಯ ವಿಧಿಸಲಾಗುತ್ತಿರುವ ಶುಲ್ಕಗಳು ಹಾಗೂ ಕರ (Cess)ಗೆ ಸಂಬಂಧಿಸಿದಂತೆ ಸುತ್ತೋಲೆ ಹಾಗೂ ಆದೇಶಗಳನ್ನು ರದ್ದುಪಡಿಸಿ ಆದೇಶ ಹೊರಡಿಸಿರುತ್ತದೆ.

ಘನ ಉಚ್ಚ ನ್ಯಾಯಾಲಯವು ಕಾನೂನಿನ ಅವಕಾಶದನ್ವಯ ಶುಲ್ಕಗಳನ್ನು ವಿಧಿಸಲು ಆದೇಶಿಸಿರುವುದರಿಂದ ಕೆ.ಎಂ.ಸಿ ಕಾಯ್ದೆ–1976 ಮತ್ತು ಬಿಬಿಎಂಪಿ ಕಾಯ್ದೆ–2020ಗೆ ಪೂರ್ವಾನ್ವಯವಾಗುವಂತೆ ತಿದ್ದುಪಡಿ ತರಲು ಸರ್ಕಾರಕ್ಕೆ ಪಾಲಿಕೆಯಿಂದ ಪ್ರಸ್ತಾವನೆಯನ್ನು ಸಲ್ಲಿಸಲಾಗಿ, ಘನ ಸರ್ಕಾರವು ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 46 ಶಾಸನ 2021 ಬೆಂಗಳೂರು ದಿನಾಂಕ: 16.11.2021 ರಂತೆ ಕೆ.ಎಂ.ಸಿ ಕಾಯ್ದೆ–1976 ಮತ್ತು ಬಿಬಿಎಂಪಿ ಕಾಯ್ದೆ–2020ಗೆ ಪೂರ್ವಾನ್ವಯವಾಗುವಂತೆ ತಿದ್ದುಪಡಿ ಮಾಡಿ ಅಧಿಸೂಚನೆಯನ್ವಯ ಆದ್ಯಾದೇಶ ಹೊರಡಿಸಿದ್ದು, ಅದರಂತೆ, ಸಂಖ್ಯೆ:ಹೆನಿನಯೋ/ಪಿಆರ್/461/2021–22 ದಿನಾಂಕ: 09–12–2021ರಂತೆ ರಲ್ಲಿ ಪಾಲಿಕೆಯಿಂದ ಕಚೇರಿ ಆದೇಶ ಹೊರಡಿಸಿ, ಅದರಂತೆ ಶುಲ್ಕಗಳನ್ನು ಪಾವತಿಸಿಕೊಳ್ಳಲಾಗುತ್ತಿರುತ್ತದೆ.

ತದ ನಂತರ, ಘನ ಸರ್ಕಾರವು ಅಧಿಸೂಚನೆ ಸಂಖ್ಯೆ:ಡಿಪಿಎಎಲ್ 50 ಶಾಸನ 2021 ಬೆಂಗಳೂರು ದಿನಾಂಕ:31–01–2022 ರಂತೆ ಕೆ.ಎಂ.ಸಿ ಕಾಯ್ದೆ–1976 ಮತ್ತು ಬಿಬಿಎಂಪಿ ಕಾಯ್ದೆ–2020ಗೆ ಪೂರ್ವಾನ್ವಯವಾಗುವಂತೆ ಅಧಿಸೂಚನೆಯನ್ವಯ ತಿದ್ದುಪಡಿ ಮಾಡಿ ಆದೇಶ ಹೊರಡಿಸಿದ್ದು, ಅದರಂತೆ, ಸಂಖ್ಯೆ: ಹೆನಿನಯೋ/ಪಿಆರ್/461/2021–22 ದಿನಾಂಕ:09–03–2022ರಂತೆ ಪಾಲಿಕೆಯಿಂದ ಕಚೇರಿ ಆದೇಶ ಹೊರಡಿಸಿ, ಅದರಂತೆ ಪ್ರಸ್ತುತ ಅಭಿವೃದ್ದಿಗಳಿಗೆ ಶುಲ್ಕಗಳನ್ನು ಪಾವತಿಸಿಕೊಳ್ಳಲಾಗುತ್ತಿರುತ್ತದೆ.

ಪ್ರಸ್ತುತ ಘನ ಸರ್ಕಾರವು ಅಧಿಸೂಚನೆ ಸಂಖ್ಯೆ:ಡಿಪಿಎಎಲ್ 50 ಶಾಸನ 2021 ಬೆಂಗಳೂರು ದಿನಾಂಕ:31–01–2022 ರಂತೆ ಕೆಎಂಸಿ ಕಾಯ್ದೆ 1976 ಹಾಗೂ ಬಿಬಿಎಂಪಿ ಕಾಯ್ದೆ 2020ಗೆ ತಿದ್ದುಪಡಿ ಕಾಯ್ದೆಯಲ್ಲಿ ಕಲ್ಪಿಸಿರುವ ಅವಕಾಶದನ್ವಯ ಸಂಖ್ಯೆ:ಹೆನಿನಯೋ/ಪಿಆರ್/461/2021–22 ದಿನಾಂಕ: 09–03–2022 ರಂದು ಹೊರಡಿಸಿರುವ ಕಚೇರಿ ಆದೇಶದಲ್ಲಿ ಸ್ವತ್ತಿನ ಮಾರ್ಗಸೂಚಿದರದ ಆಧಾರದ ಮೇಲೆ ಶುಲ್ಕಗಳನ್ನು ವಿಧಿಸಲಾಗುತ್ತಿರುವುದರಿಂದ, ವಿಧಿಸುತ್ತಿರುವ ಶುಲ್ಕವು ಹೆಚ್ಚಾಗಿರುವುದಾಗಿದ್ದು ಸ್ವತ್ತಿನ ಮಾಲೀಕರು / ಅಭಿವೃದ್ಧಿದಾರರುಗಳು ಘನ ಉಚ್ಚ ನ್ಯಾಯಾಲಯದಲ್ಲಿ ಘನ ಸರ್ಕಾರವು ಅಧಿಸೂಚನೆ ಸಂಖ್ಯೆ:ಡಿಪಿಎಎಲ್ 50 ಶಾಸನ 2021 ಬೆಂಗಳೂರು ದಿನಾಂಕ:31–01–2022 ತಿದ್ದುಪಡಿಕಾಯ್ದೆ ಮತ್ತು ಸಂಖ್ಯೆ: ಹೆನಿನಯೋ/ಪಿಆರ್/461/2021–22 ದಿನಾಂಕ:09–03–2022ರಂತೆ ಪಾಲಿಕೆಯ ಕಚೇರಿ ಆದೇಶವನ್ನು ಪ್ರಶ್ನಿಸಿ ಹಲವಾರು ರಿಟ್ ಅರ್ಜಿಗಳನ್ನು ದಾಖಲಿಸಿ, ನೆಲಬಾಡಿಗೆ, ಪರವಾನಗಿ ಶುಲ್ಕ, ಪರಿಶೀಲನಾ ಶುಲ್ಕ, ಭದ್ರತಾ ಠೇವಣಿ ಸಂಬಂಧಿಸಿದಂತೆ ತಡೆಯಾಜ್ಞೆಗಳನ್ನು ತಂದು, ಘನ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದನ್ವಯ ಉಳಿಕೆ ಶುಲ್ಕಗಳನ್ನು ಪಾವತಿಸಿ ಅನುಮತಿ / ಪರವಾನಗಿಗಳನ್ನು ಪಡೆದುಕೊಳ್ಳುತ್ತಿರುತ್ತಾರೆ.

ಅಭಿವೃದ್ದಿದಾರರು / ನಿರ್ಮಾಣದಾರರು ಅಭಿವೃದ್ದಿಗಳ ಅನುಮತಿಗೆ ಸಂಬಂಧಿಸಿದ ಶುಲ್ಕ ಪಾವತಿಗೆ ಘನ ಉಚ್ಚ ನ್ಯಾಯಾಲಯದಿಂದ ಮಧ್ಯಂತರ ತಡೆಯಾಜ್ಞೆ ತರುವ ಪ್ರಕರಣಗಳಲ್ಲಿ ಸದರಿ ತಡೆಯಾಜ್ಞೆಯನ್ನು ತೆರವುಗೊಳಿಸಲು ಪಾಲಿಕೆಯ ವತಿಯಿಂದ ಘನ ಸರ್ಕಾರವು ಅಧಿಸೂಚನೆ ಸಂಖ್ಯೆ:ಡಿಪಿಎಎಲ್ 50 ಶಾಸನ 2021 ಬೆಂಗಳೂರು ದಿನಾಂಕ:31–01–2022 ಮತ್ತು ಸಂಖ್ಯೆ: ಹೆನಿನಯೋ/ಪಿಆರ್/461/2021–22 ದಿನಾಂಕ: 09–03–2022ರಂತೆ ಆದೇಶಗಳ ಸಮರ್ಥನೆಗೆ ಸಂಬಂದಪಟ್ಟಂತೆ ಆಕ್ಷೇಪಣೆಗಳನ್ನು ಘನ ನ್ಯಾಯಾಲಯದಲ್ಲಿ ಸಲ್ಲಿಸಲು ಪಾಲಿಕೆಯ ಪ್ಯಾನಲ್ ವಕೀಲರನ್ನು ನಿಯೋಜಿಸಲಾಗಿದ್ದು, ಹಾಗೂ ಈ ಬಗ್ಗೆ ಹಿರಿಯ ಸಂವಿಧಾನ ತಜ್ಞ ವಕೀಲರಾದ ಶ್ರೀ ವಿ. ಸುದೇಶ್ ಪೈ, ರವರ ಅಭಿಪ್ರಾಯವನ್ನು ಕೋರಲಾಗಿ, ಸದರಿರವರು ಘನ ಸರ್ಕಾರವು ಅಧಿಸೂಚನೆ ಸಂಖ್ಯೆ:ಡಿಪಿಎಎಲ್ 50 ಶಾಸನ 2021 ಬೆಂಗಳೂರು ದಿನಾಂಕ:31–01–2022 ರಲ್ಲಿ ಕಾಯ್ದೆಗೆ ತಂದಿರುವ ತಿದ್ದುಪಡಿಯಲ್ಲಿ ಘನ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ. 4601/2021 ಮತ್ತು ಇನ್ನಿತರೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಹೊರಡಿಸಿರುವ ಅಂತಿಮ ಆದೇಶ ದಿನಾಂಕ:

04-08-2021.ರಂತೆ ಘನ ಉಚ್ಚನ್ಯಾಯಾಲಯದ ಆದೇಶದಲ್ಲಿ ಉಲ್ಲೇಖಿಸಿರುವ ಅಂಶಗಳ ಬಗ್ಗೆ ಸಮರ್ಪಕವಾಗಿ ತಿದ್ದುಪಡಿ ಕಾಯ್ದೆಗಳಲ್ಲಿ ಅವಕಾಶಗಳನ್ನು ತಂದಿರದ ಹಿನ್ನಲೆಯಲ್ಲಿ ಸದರಿ ನ್ಯೂನತೆಗಳನ್ನು ಸರಿಪಡಿಸಲು ಕಾಯ್ದೆಗೆ ಮತ್ತೊಮ್ಮೆ ಕೆಲವು ತಿದ್ದುಪಡಿ ಮಾಡುವ ಅವಶ್ಯಕತೆ ಇರುತ್ತದೆಯೆಂದು ಹಾಗೂ ಘನ ಸರ್ಕಾರವು ಅಧಿಸೂಚನೆ ಸಂಖ್ಯೆ:ಡಿಪಿಎಎಲ್ 50 ಶಾಸನ 2021 ಬೆಂಗಳೂರು ದಿನಾಂಕ:31-01-2022ಕಾಯ್ದೆಗಳಿಗೆ ತಿದ್ದುಪಡಿಯಾಗದ ಹೊರತು ನ್ಯಾಯಾಲಯದಲ್ಲಿ ಪಾಲಿಕೆಗೆ ಹಿನ್ನಡೆಯಾಗುವ ಸಾಧ್ಯತೆ ಬಹಳ ಹೆಚ್ಚಾಗಿರುತ್ತದೆಂದು ಅಭಿಪ್ರಾಯಿಸಿರುತ್ತಾರೆ.

ಘನ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ.4601/2021 ಮತ್ತು ಇನ್ನಿತರೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಹೊರಡಿಸಿರುವ ಅಂತಿಮ ಆದೇಶ ದಿನಾಂಕ:04-08-2021.ರಂತೆ ಹೊರಡಿಸಿರುವ ಆದೇಶದಲ್ಲಿ ಈಗಾಗಲೇ ಪಾವತಿಸಿರುವ ಶುಲ್ಕಗಳನ್ನು ಹಿಂದಿರುಗಿಸಲು ಆದೇಶಿಸಿದ್ದು, ಪಾಲಿಕೆಯಿಂದ ಈಗಾಗಲೇ ಪಾವತಿಸಿಕೊಳ್ಳಲಾಗಿರುವ ಶುಲ್ಕಗಳನ್ನು ಪಾಲಿಕೆಯ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಲಾಗಿದ್ದು, ಅದರನ್ವಯ ಬಹುತೇಕ ಕಾಮಗಾರಿ ಮುಕ್ತಾಯಗೊಂಡಿದ್ದು ಹಾಗೂ ಕೆಲವು ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿರುವುದರಿಂದ ಹಾಗೂ ಅಭಿವೃದ್ಧಿಗಳ ಅನುಮತಿಗೆ ಸಂಬಂಧಿಸಿದ ಶುಲ್ಕ ಪಾವತಿಗೆ ಘನ ಉಚ್ಚ ನ್ಯಾಯಾಲಯದಿಂದ ಮಧ್ಯಂತರ ತಡೆಯಾಜ್ಞೆ ತರುವ ಪ್ರಕರಣಗಳಲ್ಲಿ ಸದರಿ ತಡೆಯಾಜ್ಞೆಯನ್ನು ತೆರವುಗೊಳಿಸಲು ಪಾಲಿಕೆಯ ವತಿಯಿಂದ ವಿಫಲವಾದಲ್ಲಿ ಪಾಲಿಕೆಗೆ ಸುಮಾರು 2362 ಕೋಟಿ ಆರ್ಥಿಕ ಹೊರೆಯಾಗುತ್ತದೆ. ಹಿರಿಯ ವಕೀಲರು ಘನ ಉಚ್ಚ ನ್ಯಾಯಾಲಯದಲ್ಲಿ ಬಿಬಿಎಂಪಿ ಕಾಯ್ದೆ 2020ಕ್ಕೆ ಈ ಹಿಂದೆ ತಂದಿರುವ ತಿದ್ದುಪಡಿಗಳನ್ನು ಕಾನೂನು ಬದ್ಧವಾದ ತಿದ್ದುಪಡಿಗಳೆಂದು ಘನ ಉಚ್ಚನ್ಯಾಯಾಲಯದಿಂದ ಆದೇಶ ಪಡೆಯಲು ಈಗ ಹೆಚ್ಚುವರಿಯಾಗಿ ಪ್ರಸ್ತಾಪಿಸಿರುವ ತಿದ್ದುಪಡಿಗಳು ಅವಶ್ಯವಿದೆಯೆಂದು ತಿಳಿಸಿರುವ ಹಿನ್ನಲೆಯಲ್ಲಿ, ಸದರಿ ಪ್ರಕರಣ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ತೀರಾ ಗಂಭೀರವಾದ ಪ್ರಕರಣವಾಗಿರುವುದರಿಂದ ಈಗಾಗಲೇ ತಂದಿರುವ ತಿದ್ದುಪಡಿಗಳಲ್ಲಿರುವ ಕೆಲವು ಸಣ್ಣಪುಟ್ಟ ಕಾನೂನು ದೋಷಗಳನ್ನು ಸರಿಪಡಿಸಿಕೊಂಡು ಮುಂದುವರೆಯುವುದು ಸೂಕ್ತವೆಂಬ ಅಭಿಪ್ರಾಯವನ್ನು ಹಿರಿಯ ವಕೀಲರ ಸಲಹೆಯಂತೆ ಬಿಬಿಎಂಪಿ ಕಾಯ್ದೆ - 2020 ಹಾಗೂ ಕೆ.ಎಂ.ಸಿ ಕಾಯ್ದೆ 1976 ಗೆ ಪ್ರತ್ಯೇಕವಾಗಿ ಈ ಕೆಳಕಂಡ ತಿದ್ದುಪಡಿಗಳನ್ನು ತಯಾರಿಸಿದೆ.

## Proposed Amendments to BBMP Act 2020

| Sl. No. | Section | Existing Provision | Proposed Amendment | Reasons for Amendments |
|---|---|---|---|---|
| 1 | | Chapter I<br>Preliminary | | |
| | 2 | Definitions | | |
| | Clause (26) | Government" means the Government of Karnataka:, | "Government" means the Government of Karnataka:, | |
| | (26)(A) | | "Ground rent" means to include fees for usage of public roads & other infrastructure facilities provided and maintained by BBMP and debris generated, during the period of construction. This does not give the right to occupy public road and footpath. | |

| | | | | |
|---|---|---|---|---|
| | (26)(B) | | "Guidance value" means market value of the vacant plot as per Section 45B of the Karnataka Stamp Act 1957. | |
| | (49)(A) | | "Scrutiny fee" means fee collected for meeting the establishment charges for processing the application for Permitting Building Constructions. | |
| | | Chapter XIII<br>Taxes | **Chapter XIII**<br>Taxes, Fee, Levy, Charge & Demand | |
| 2 | 142 | **Taxes which may be imposed.-** (1) Subject to general and specific orders of the Government, the corporation may impose the following taxes at rates not exceeding those specified in the Act-<br><br>(a) A tax on buildings or vacant land or both situated in the jurisdiction of the corporation.<br><br>(b) A tax on profession, trades, callings and employments.<br><br>(c) A tax on entertainments and amusements.<br><br>(d) A duty on certain transfers of property in the form of additional stamp duty.<br><br>(e) Any other taxes which may be assigned by law for the assessment and collection by the Corporation.<br><br>(2) The corporation shall, by way of resolution passed at a general | **Taxes,** Fee, Levy, Charge & Demand call it by whatever name **which may be imposed.-**(1) Subject to general and specific orders of the Government, the Corporation may impose the following taxes, fee, levy, charge, demand call it by whatever name at such rates not exceeding those specified in this Act.<br><br>(a) A tax on buildings or vacant land or both situated in the jurisdiction of the corporation.<br><br>(b) A tax on profession, trades, callings and employments.<br><br>(c) A tax on entertainments and amusements.<br><br>(d) (d)(i) A duty on certain transfers of property in the form of additional stamp duty.<br><br>(d)(ii) Any fee/ levy/ demand/ charge for Permitting Building Constructions.<br><br>(e) Any other taxes which may be assigned by law for the assessment and collection by the Corporation.<br><br>(2) The corporation shall, by way of resolution passed at a general | There is power to the BBMP to impose the levy / fees / demand / charge for permitting building constructions at such rates not exceeding those specified in the act<br><br>It is relevant to note that the word fee / levy / charge / demand is conspicuously missing.<br><br>Further it does not specify the extent of the power that can be exercised by the Chief Commissioner; hence the upper limit of chargeable levy must be specified in terms of percentage traceable to Built-up Area Value specified under section 45(B) Karnataka Stamp Act 1957. Hence it becomes very much necessary to specify the upper limit of demand that could be levied as otherwise it could be held that there is excessive delegation of power. |

| | | | | |
|---|---|---|---|---|
| | | meeting of the council, determine the classes of person or properties or entities which shall be assessed for tax and the rate of such tax.<br>(3) The Corporation may, at any time for sufficient reason, suspend, modify or abolish any existing tax: Provided that, the Government may, by notification, require the Corporation to impose any tax specified in the notification as may be imposed under this section in such manner and to such extent as the Government considers fit.<br><br>(4) Every resolution passed by the council under subsection (2) shall be published in the public domain for the notice of all the concerned. | meeting of the council, determine the classes of person or properties or entities which shall be assessed for tax and the rate of such tax.<br><br>(3) The Corporation may, at any time for sufficient reason, suspend, modify or abolish any existing tax: Provided that, the Government may, by notification, require the Corporation to impose any tax specified in the notification as may be imposed under this section in such manner and to such extent as the Government considers fit.<br><br>(4) Every resolution passed by the council under sub section (2) shall be published in the public domain for the notice of all the concerned. | |
| | | **Chapter XVI<br>Regulation of Building including<br>Town planning** | | |
| 3 | 240 (A) | **Levy of imposts, restriction and condition.**-(1)The Chief Commissioner may grant such permission to execute the work together with a site plan of the land, ground plan, elevations and sections of the building subject to such restrictions and conditions, as may be specified in the bye-laws or he may refuse to grant such licence, subject to the conditions specified in section 244.<br><br>(2) The Chief Commissioner while fixing the rates for levy of fee or penalty shall consider all the costs related to the issue and execution of the approval as he may deem fit.<br><br>(3) The Chief Commissioner may for approving or sanctioning the plan or grant of commencement certificate or completion certificate,- | **Levy of imposts, restriction and condition.**(1)The Chief Commissioner may grant such permission to execute the work together with a site plan of the land, ground plan, elevations and sections of the building subject to such restrictions and conditions, as may be specified in the bye-laws or he may refuse to grant such licence, subject to the conditions specified in section 244.<br><br>(2) The Chief Commissioner while fixing the rates for levy of fee or penalty shall consider all the costs related to the issue and execution of the approval as he may deem fit.<br><br>(3) The Chief Commissioner may for approving or sanctioning the plan or grant of commencement certificate or completion certificate,- | |

| | | | | |
|---|---|---|---|---|
| | | (A)charge and levy the following fee at such rates based on the Guidance Value fixed by the Department of Stamps and Registration under the provisions of the Karnataka Stamp Act, 1957, namely:-<br><br>(a) fee for issuance of license;<br><br>(b) fee for maintenance of public roads or storing of construction materials in public places during construction viz, ground rent;<br><br>(c) security fee ensuring that the construction is in accordance with plan sanctioned;<br><br>(d) fee for commencement certificate;<br><br>(e) fee for completion certificate; and<br><br>(f) such other fee as specified by the Government from time to time. | (A) Charge and levy the following fee at such rates based on the Guidance Value fixed by the Department of Stamps and Registration under the provisions of the Karnataka Stamp Act, 1957, namely:-<br><br>(a) fee for issuance of license; at such rate not exceeding 0.30%, of guidance value of vacant plot multiplied by proposed built up area.<br><br>(b) fee for maintenance of public roads or storing of construction materials in public places during construction viz, ground rent; at such rate not exceeding 0.25% of guidance value of vacant plot multiplied by proposed built up area.<br><br>(c) as security fee deposit as prescribed in zoning regulation for ensuring that the construction is in accordance with plan sanction;<br><br>(d) fee for commencement certificate; at such rate not exceeding 0.20%, of guidance value of vacant plot multiplied by proposed plinth area.<br><br>(e) fee for completion certificate; and at such rate not exceeding 1%, of guidance value of vacant plot multiplied by proposed built up area.<br><br>(f) such other fee as specified prescribed under K.T.C.P Act 1961 specified by the Government from time to time.<br><br>(g) for Scrutiny: at such rate not exceeding 0.10%, of guidance value of vacant plot multiplied by proposed built up area.<br><br>(h)Penalty imposed at the time of issuance of completion certificate for not obtaining commencement certificate at the commencement of | |

| | | | | |
|---|---|---|---|---|
| | | | the construction at such rate not exceeding 0.25%, of guidance value of vacant plot multiplied by constructed built up area.<br><br>(i) Penalty for regularisation of violated or deviated portion of construction upto the extent allowed under the Act at such rate not exceeding 35% of the guidance value of plot for violated portion.<br><br>(j) Such other fee as specified by the Government from time to time. | |
| | | (B) charge and levy any other deposit or fee or cess specified under any other law in force | (B) charge and levy any other deposit or fee or cess specified under any other law in force | |

## Proposed Amendments to KMCAct 1976

| Sl. No. | Section | Existing Provision | Proposed Amendment | Reasons for Amendments |
|---|---|---|---|---|
| 1 | | Chapter I<br>Preliminary | | |
| | 2 | Definitions | | |
| | Clause 13 | | | |
| | (13)(A) | | "Ground rent" means to include fees for usage of public roads & other infrastructure facilities provided and maintained by Corporation and debris generated, during the period of construction. This does not give the right to occupy public road and footpath. | |
| | (13)(B) | | Guidance value means market value of the vacant plot as per section 45B of the Karnataka Stamp Act 1957. | |
| | (40)(A) | | "Scrutiny fee" means fee collected for meeting the establishment charges for processing the application for Permitting Building Constructions. | |

| | | | | |
|---|---|---|---|---|
| | | Chapter XV<br>Regulation of Buildings<br>General Powers | Chapter XV<br>Regulation of Buildings<br>General Powers including<br>Town Planning | |
| 2 | 299 (A) | **Levy of imposts, restrictions and conditions in respect of Bruhat Bengaluru Mahanagara Palike.-** (1)The Commissioner may grant such permission to execute the work together with a site plan of the land, ground plan, elevations and section of the building subject to such restrictions and conditions, as may be specified in the zoning regulations or building bye-laws or he may refuse to grant such license subject to the conditions specified in section 303.<br><br>(2) The Commissioner may for approving or sanctioning the plan or grant of commencement certificate or completion certificate, charge and levy the following fee at such rates based on the guidance value fixed by the Department of Stamps and Registration under the provisions of the Karnataka Stamp Act, 1957, namely:-<br><br>(a) fee for issuance of license;<br><br>(b) fee for security of the building for which license granted; | **Levy of imposts, restrictions and conditions in respect of Bruhat Bengaluru Mahanagara Palike.-** (1)The Commissioner may grant such permission to execute the work together with a site plan of the land, ground plan, elevations and section of the building subject to such restrictions and conditions, as may be specified in the zoning regulations or building bye-laws or he may refuse to grant such license subject to the conditions specified in section 303.<br><br>(2) The Commissioner may for approving or sanctioning the plan or grant of commencement certificate or completion certificate, charge and levy the following fee at such rates based on the guidance value of vacant plot fixed by the Department of Stamps and Registration under the provisions of the Karnataka Stamp Act, 1957, namely:-<br><br>(a) fee for issuance of license; at such rate not exceeding 0.30%, of guidance value of vacant plot multiplied by proposed built up area.<br><br>(b) fee for security of the building for which license granted; scrutiny at such rate not exceeding 0.10% | There is power to the Corporation to impose the levy / fees / demand / charge for permitting building constructions at such rates not exceeding those specified in the act<br><br>Further it does not specify the extent of the power that can be exercised by the Commissioner; hence the upper limit of chargeable levy must be specified in terms of percentage traceable to Built-up Area Value specified under section 45(B) Karnataka Stamp Act 1957. Hence it becomes very much necessary to specify the upper limit of demand that could be levied as otherwise it could be held that there is excessive delegation of power. |

| | | | | |
|---|---|---|---|---|
| | | | of guidance value of vacant plot multiplied by proposed built up area. | |
| | | (c) fee for maintenance of public roads or storing of construction materials inpublic places during construction viz, ground rent; | (c) fees for maintenance usage of public roads or storing of construction materials inpublic places & other infrastructure facilities provided and maintained by Corporation and debris generated, during period of construction viz, ground rent; at such rate not exceeding 0.25% of guidance value of vacant plot multiplied by proposed built up area. | |
| | | (d) security fee, ensuring that the construction is in accordance with plan sanctioned; | (d) security fee deposit as prescribed in zoning regulation for ensuring that the construction is in accordance with plan sanctioned; | |
| | | (e) fee for commencement certificate; | (e) fee for commencement certificate; at such rate not exceeding 0.20%, of guidance value of vacant plot multiplied by proposed plinth area. | |
| | | (f) fee for occupancy certificate; | (f) fee for occupancy certificate; at such rate not exceeding 1%, of guidance value of vacant plot multiplied by proposed built up area. | |
| | | (g) penalty imposed at the time of issuance of occupancy certificate for not obtaining commencement certificate at the commencement of the construction; | (g) penalty imposed at the time of issuance of occupancy certificate for not obtaining commencement certificate at the commencement of the construction; at such rate not exceeding 0.25%. of guidance value of vacant plot multiplied by constructed built up area | |
| | | (h) penalty for regularization up to 5% of | (h) penalty for regularization up to 5% of violation or deviation in | |

| | | | | |
|---|---|---|---|---|
| | | violation or deviation in the construction with respect to sanctioned plan or zonal regulation limit; and | the construction with respect to sanctioned plan or zonal regulation limit prescribed at such rate not exceeding 35% of guidance value of vacant plot multiplied by violated portion. | |
| | | (i) such other fee as specified by the Government from time to time. | (i) Such other fee as specified prescribed under KTCP Act 1961 and specified by the Government from time to time. | |

ಹಾಗಾಗಿ ಹಿರಿಯ ಕಾನೂನು ತಜ್ಞರ ಅಭಿಪ್ರಾಯದನ್ವಯ ಕೆ.ಎಂ.ಸಿ ಕಾಯ್ದೆ–1976 ಗೆ ದಿನಾಂಕ: 04–09–2015 ರಿಂದ ಪೂರ್ವಾನ್ವಯವಾಗುವಂತೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ–2020 ಗೆ ದಿನಾಂಕ: 21–12–2020 ರಿಂದ ಪೂರ್ವಾನ್ವಯವಾಗುವಂತೆ ತಿದ್ದುಪಡಿ ಮಾಡುವ ಅವಶ್ಯಕತೆ ಇದ್ದು, ಈ ಮೇಲಿನ ಕೋಷ್ಟಕಗಳಲ್ಲಿ ವಿವರಿಸಿರುವಂತೆ ಕಾಯ್ದೆಗಳಿಗೆ ತಿದ್ದುಪಡಿತರುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ ಕೋರುತ್ತಾ, ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಫೀಲು ಸ್ಥಾಯಿ ಸಮಿತಿ, ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಮುಖ್ಯ ಆಯುಕ್ತರವರ ದಿನಾಂಕ: 18–05–2023ರ ಟಿಪ್ಪಣಿ.

**ತೀರ್ಮಾನ: ಮುಖ್ಯ ಆಯುಕ್ತರು ರವರ ದಿನಾಂಕ:18–05–2023ರ ಟಿಪ್ಪಣಿಯನ್ನು ಒಪ್ಪಿದೆ.**

(ರಾಕೇಶ್ ಸಿಂಗ್)
ಆಡಳಿತಗಾರರು

**ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ, ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: ೧೮ – ೦೬ –2023ರ ನಡವಳಿಗಳು**

**ವಿಷಯ ಸಂಖ್ಯೆ: 07/2023-24**

ಪ್ರಸ್ತಾವನೆ :

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ದೊಡ್ಡನಕ್ಕುಂದಿ ಗ್ರಾಮದ ಸರ್ವೆ ನಂ: 72, 74, 75 ಮತ್ತು 77 ರ 08–05 ಎ/ಗು ವಿಸ್ತೀರ್ಣದ ಖಾಸಗಿ ಸ್ವತ್ತಿನಲ್ಲಿ ಪರಿಷ್ಕೃತ ಮಹಾನಕ್ಷೆ–2015 ರ ಅನ್ವಯ ಗ್ರಾಫೈಟ್ ಇಂಡಿಯಾ ರಸ್ತೆ ಮತ್ತು ಗೋಶಾಲೆ ರಸ್ತೆಗಳನ್ನು 18.00 ಮೀಟರ್ ಅಗಲಕ್ಕೆ ಅಗಲೀಕರಣ ಕೈಗೊಳ್ಳಲು ಪ್ರಸ್ತಾಪಿಸಲಾಗಿದ್ದು, ಆಶ್ರಯ ಬಡಾವಣೆಯ ವ್ಯಾಪ್ತಿಯ ಗ್ರಾಫೈಟ್ ಇಂಡಿಯಾ ರಸ್ತೆ ಮತ್ತು 2ನೇ ಮುಖ್ಯರಸ್ತೆ ಜಂಕ್ಷನ್‌ಅನ್ನು ಅಗಲಗೊಳಿಸಿ ಮುಕ್ತ ಎಡ ತಿರುವು ವ್ಯವಸ್ಥೆಯನ್ನು ಕಲ್ಪಿಸಲು ಸ್ಥಳೀಯ ಪಾಲಿಕೆ ಸದಸ್ಯರು ಮತ್ತು ಮಾನ್ಯ ವಿಧಾನ ಸಭಾ ಸದಸ್ಯರು ಸ್ಥಳ ಪರಿಶೀಲಿಸಿ, ಮುಕ್ತ ಎಡ ತಿರುವು ಕಲ್ಪಿಸಲು ಪರಿಷ್ಕೃತ ಮಹಾನಕ್ಷೆ–2015ರ ಅಗಲಕ್ಕಿಂತ ಹೆಚ್ಚಿಗೆ ಅವಶ್ಯವಿರುವ ಹೆಚ್ಚುವರಿ ಭೂ ಭಾಗ 1071.00 ಚ.ಮೀ. ಗಳನ್ನು ಟಿ.ಡಿ.ಆರ್ ಅನ್ವಯ ಭೂಸ್ವಾಧೀನಕ್ಕೆ ಸ್ವತ್ತಿನ ಮಾಲೀಕರು ಒಪ್ಪಿರುತ್ತಾರೆ. ಇದೇ ರಸ್ತೆಯು ಬಡಾವಣೆಗಳಿಗೆ ಸಂಚರಿಸಲು ಮುಖ್ಯ ಸಂಪರ್ಕ ರಸ್ತೆಯಾಗಿರುತ್ತದೆ. ಸದರಿ ರಸ್ತೆಯನ್ನು ಹಾಲಿ ಸುಮಾರು 12.00 ಮೀಟರ್‌ನಿಂದ 18.00 ಮೀಟರ್ ಅಗಲಕ್ಕೆ ಅಗಲೀಕರಣಗೊಳಿಸಿ ಅಭಿವೃದ್ಧಿಪಡಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಖಾಸಗಿ ಸ್ವತ್ತನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಕೆ.ಟಿ.ಸಿ.ಪಿ ಕಾಯ್ದೆ 1961 ಕಲಂ 14(ಬಿ) ರಡಿ ನಗದುರೂಪದ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕು ಪ್ರಮಾಣಪತ್ರ ರೂಪದ ಪರಿಹಾರದ ಮೂಲಕ ಭೂಸ್ವಾಧೀನಪಡಿಸಿಕೊಳ್ಳಬಹುದಾಗಿದ್ದು, ಕಾಯ್ದೆಯ ಕಲಂ 14(ಬಿ) ಉಪಪ್ರಕರಣ (1) ರ ಅವಕಾಶ ಈ ಕೆಳಕಂಡಂತಿದೆ.

> **Notifying 'Area' for public purpose:-(1) Ina Local planning Area listed at Appendix-1 if any public Authority requires any Area for public purpose, it shall notify the same in Form-1 stating the facts of the Area required by the authority specifying the limits of the Area along with the statement specifying the land which is required to be acquired in lieu of compensation under the right to fair compensation and Transparency in Land Acquisition, Rehabilitation and Resettlement Act, 2013 (Central Act 30 of 2013) and entitled to be granted Development Rights in the Official gazette and in one or more news papers circulating within the Local Planning Area as the Public Authority deems fit)**

ಮುಂದುವರೆದು, ಸದರಿ ರಸ್ತೆಯು ಪರಿಷ್ಕೃತ ಮಹಾನಕ್ಷೆ–2015ರ ಅಗಲಕ್ಕಿಂತ ಹೆಚ್ಚಿಗೆ ಅವಶ್ಯವಿರುವ ಹೆಚ್ಚುವರಿ ಭೂಭಾಗ ರಸ್ತೆಯಾದ್ದರಿಂದ, ಕಲಂ 14(ಬಿ) ಉಪ ಪ್ರಕರಣ (1) ರ ಕೋಷ್ಟಕದಲ್ಲಿ ಕ್ರಸಂ: 1(1) ರಂತೆ ಸಾರ್ವಜನಿಕ ಪ್ರಾಧಿಕಾರವು ಪ್ರಸ್ತಾಪಿಸುವ ಯಾವುದೇ ರಸ್ತೆ ಅಗಲೀಕರಣ/ನಿರ್ಮಾಣ ಪ್ರದೇಶಕ್ಕೆ ಡಿ.ಆರ್.ಸಿ. ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.

ಆದ್ದರಿಂದ, ಮೇಲ್ಕಂಡ ಅವಕಾಶದಂತೆ ಸಾರ್ವಜನಿಕ ಉಪಯೋಗಕ್ಕೆ ಅವಶ್ಯವಿರುವ ರಸ್ತೆ ಜಾಗವನ್ನು ಟಿ.ಡಿ.ಆರ್ ರೂಪದ ಪರಿಹಾರದ ಮೂಲಕ ಸ್ವಾಧೀನಪಡಿಸಿಕೊಳ್ಳಲು ಪಾಲಿಕೆಯ ನಗರ ಯೋಜನೆ ಅಭಿವೃದ್ಧಿ ಸ್ಥಾಯಿ ಸಮಿತಿ ಮತ್ತು ಪಾಲಿಕೆಯ ಕೌನ್ಸಿಲ್ ಸಭೆಯ ಅನುಮೋದನೆ ಪಡೆಯಬೇಕಾಗಿರುತ್ತದೆ.

ಗ್ರಾಫೈಟ್ ಇಂಡಿಯಾ ರಸ್ತೆಯಿಂದ ಆಶ್ರಯ ಬಡಾವಣೆ ಮಾರ್ಗ ರಸ್ತೆ ಸಂಪರ್ಕ ಕಲ್ಪಿಸುವ ಸಲುವಾಗಿ ಹನುಮಾನ್ ದೇವಾಲಯ ಜಂಕ್ಷನ್ ನಲ್ಲಿ ರಸ್ತೆ ಅಗಲೀಕರಣಗೊಳಿಸಿ ಮುಕ್ತ ಎಡತಿರುವು ವ್ಯವಸ್ಥೆಯನ್ನು ಕಲ್ಪಿಸಲು ಅವಶ್ಯವಿರುವ ಹೆಚ್ಚುವರಿ ಭೂಮಿಯನ್ನು ಭೂ-ಸ್ವಾಧೀನಪಡಿಸಿಕೊಳ್ಳಲು ಮೋಜಿಣಿದಾರರು ಸರ್ವೆ ಮಾಡಿ ನಕ್ಷೆಯನ್ನು ತಯಾರಿಸಿದ್ದು, ಸದರಿ ನಕ್ಷೆಯಂತೆ ಹಾಲಿ ರಸ್ತೆ ಜಾಗವನ್ನು ಹೊರತುಪಡಿಸಿ ಟಿ.ಡಿ.ಆರ್ ಮೂಲಕ ಸ್ವಾಧೀನಪಡಿಸಿಕೊಳ್ಳಲು ಸುಮಾರು 765.19 ಚ.ಮೀ ಜಾಗದ ಅವಶ್ಯಕತೆ ಇರುತ್ತದೆ. ಪ್ರಸ್ತಾಪಿತ ಕಾಮಗಾರಿಗೆ ಅವಶ್ಯವಿರುವ ಸ್ವತ್ತಿನ ವಿವರವನ್ನು ನಕ್ಷೆಯಲ್ಲಿ ಗುರುತಿಸಿರುವಂತೆ ಅವಶ್ಯವಿರುವ ಜಾಗದ ಮಾಲೀಕರ ಸ್ವತ್ತಿನ ವಿವರ ಈ ಕೆಳಕಂಡಂತೆ ಇದೆ.

| Sl. No | Address of the plot | Type of Land | Nature of Land | Area (in Sqm | Boundaries of the land/Plot | | | |
|---|---|---|---|---|---|---|---|---|
| | | | | | East | West | North | South |
| 1 | M/s. Prestige Whitefield investment Sy No:77, Doddanakkundi Village, K.R. Puram Hobli, Bangalore East Taluk. | Private Land | Vacant | 765.19 | Remainin g Portion of Sy No: 77 | Road | Road | Road |

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತಾಪಿತ ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್ ಪುರಂ ಹೋಬಳಿ, ದೊಡ್ಡನಕ್ಕುಂದಿ ಗ್ರಾಮದ ಸರ್ವೆ ನಂ:77 ಗ್ರಾಫೈಟ್ ಇಂಡಿಯಾ ರಸ್ತೆಯಿಂದ ಆಶ್ರಯ ಬಡಾವಣೆ ಮಾರ್ಗ ರಸ್ತೆ ಸಂಪರ್ಕ ಕಲ್ಪಿಸುವ ಸಲುವಾಗಿ ಹನುಮಾನ್ ದೇವಾಲಯ ಜಂಕ್ಷನ್ ನಲ್ಲಿ ರಸ್ತೆ ಅಗಲೀಕರಣಗೊಳಿಸಿ ಮುಕ್ತ ಎಡತಿರುವು ವ್ಯವಸ್ಥೆಯನ್ನು ಕಲ್ಪಿಸಲು ಅವಶ್ಯವಿರುವ ಹೆಚ್ಚುವರಿ ಭೂಮಿಯನ್ನು ಭೂ-ಸ್ವಾಧೀನಪಡಿಸಿಕೊಳ್ಳಲು ಹಾಗೂ ಸದರಿ ರಸ್ತೆಯು ಆರ್.ಎಂ.ಪಿ-2015ರಲ್ಲಿ ಸೇರಿರುವುದಿಲ್ಲವಾದುದರಿಂದ ರಸ್ತೆ ಅಭಿವೃದ್ಧಿಪಡಿಸಲು ಅವಶ್ಯವಿರುವ ಜಾಗಕ್ಕೆ ಹೊಸ ಟಿ.ಡಿ.ಆರ್ ನಿಯಮಾವಳಿ ಅನ್ವಯ ಸ್ವಾಧೀನಪಡಿಸಿಕೊಳ್ಳುವ ಸಂಬಂಧ ಅಧಿಸೂಚನೆ ಹೊರಡಿಸಲು ಅನುಮೋದನೆ ಕೋರುತ್ತಾ, ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ, ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು(ಕಂದಾಯ) ರವರ ದಿನಾಂಕ:18-05-2023ರ ಟಿಪ್ಪಣಿ.

**ತೀರ್ಮಾನ: ವಿಶೇಷ ಆಯುಕ್ತರು (ಕಂದಾಯ) ರವರ ದಿನಾಂಕ: 18-05-2023ರ ಟಿಪ್ಪಣಿಯನ್ನು ಒಪ್ಪಿದೆ.**

(ರಾಕೇಶ್ ಸಿಂಗ್)
ಆಡಳಿತಗಾರರು

## ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ, ಸಾರ್ವಜನಿಕ ಆರೋಗ್ಯ, ಘನತ್ಯಾಜ್ಯ ಮತ್ತು ವಿಪತ್ತು ನಿರ್ವಹಣೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 16 – 06 –2023ರ ನಡವಳಿಗಳು

**ವಿಷಯದ ಸಂಖ್ಯೆ: 25/2023-24**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕರಲ್ಲಿ ಘನತ್ಯಾಜ್ಯ ನಿರ್ವಹಣೆ ನಿಯಮಾವಳಿಗಳನ್ವಯ ಶಿಸ್ತು ಜಾರಿಗೊಳಿಸಲು **Clean up Ward** ಮಾರ್ಷಲ್‌ಗಳು ಹಾಗೂ ಅತ್ಯವಶ್ಯಕವಿರುವ ಕೆಲವು ಮುಖ್ಯ ಕಾರ್ಯಗಳಿಗೆ ಮಾರ್ಷಲ್‌ಗಳ ಸೇವೆಯನ್ನು **Karnataka Ex-Serviceman Welfare Society(R)** ರವರ ಮೂಲಕ ಪಡೆಯಲಾಗಿರುತ್ತದೆ. ಮಾರ್ಷಲ್‌ಗಳ ಸೇವೆಯನ್ನು ಪಡೆದುಕೊಡಿರುವ ಪ್ರಕ್ರಿಯೆ ಮತ್ತು ಅವಶ್ಯಕತೆ ವಿವರಗಳನ್ನು ಈ ಕೆಳಕಂಡ ಅಂಶಗಳಲ್ಲಿ ವಿವರಿಸಿದೆ.

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧ ಜಾರಿಗೊಳಿಸಲು ದಂಡ ವಿಧಿಸುವ ದೈನಂದಿನ ಉಸ್ತುವಾರಿ ನಡೆಸುವ ಅಗತ್ಯತೆಯಿರುತ್ತದೆ. ನಗರವನ್ನು ಸುಂದರವಾಗಿಡಲು ಮತ್ತು ಸಾರ್ವಜನಿಕರಿಗೆ ದಂಡ ವಿಧಿಸಲು ದೈನಂದಿನ ಉಸ್ತುವಾರಿ ನಡೆಸಲು ನಿವೃತ್ತ ಸೇವಾ ಸಿಬ್ಬಂಧಿಗಳನ್ನು ಮಾರ್ಷಲ್‌ಗಳಾಗಿ ನೇಮಿಸಲು ಘನ ಉಚ್ಚನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:24739/2012 ರ ದಿನಾಂಕ: 23-06-2016 ನಿರ್ದೇಶನದಲ್ಲಿ ಸೂಚಿಸಲಾದಂತೆ, 26-04-2017 ರಂದು ನಡೆದ ಪಾಲಿಕೆಯ ತೀರ್ಮಾನ ಸಂಖ್ಯೆ:02(337)/2016-17 ರಲ್ಲಿ ಪ್ರಾಯೋಗಿಕವಾಗಿ ಪ್ರತಿ ವಲಯದ ಒಂದು ವಾರ್ಡ್‌ನಲ್ಲಿ ಮಾರ್ಷಲ್‌ಗಳನ್ನು ನಿಯಮಾನುಸಾರ ನಿಯೋಜನೆ ಮಾಡಲು ಆಯುಕ್ತರು ಕ್ರಮವಹಿಸುವುದು, ಸದರಿ ವಾರ್ಡ್‌ಗಳಲ್ಲಿ ಕಸ ನಿರ್ವಹಣೆ ಮತ್ತು ಮಾರ್ಷಲ್‌ಗಳ ಕಾರ್ಯನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಿದ್ದ ಮಾರ್ಷಲ್‌ಗಳನ್ನು ನೇಮಿಸಿಕೊಳ್ಳುವ ಬಗ್ಗೆ ಆಯುಕ್ತರು ಕ್ರಮವಹಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ.

2. ಪಾಲಿಕೆಯ ಕೌನ್ಸಿಲ್ ಸಭೆಯ ತೀರ್ಮಾನದಂತೆ, ಮಾರ್ಷಲ್ ಗಳನ್ನು ನಿಯೋಜಿಸಿಕೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಗಳಲ್ಲಿ ಪಾರದರ್ಶಕ ಅಧಿನಿಯಮ 1999 ಕಲಂ 4(ಇ) ಅನ್ವಯ ವಿನಾಯ್ತಿ ಕೋರಿ ಹಾಗೂ ಮಾರ್ಷಲ್‌ಗಳಿಗೆ ಪಾಲಿಕೆಯ ಅಯವ್ಯಯದ ಲೆಕ್ಕ ಶೀರ್ಷಿಕೆ ಸಂಖ್ಯೆ:ಪಿ3228- ಮಾರ್ಷಲ್ ಗಳಿಗೆ ಗೌರವಧನದಡಿಯಲ್ಲಿ ಕಾಯ್ದಿರಿಸುವ ಮೊತ್ತದಲ್ಲಿ ಭರಿಸಲು ಅನುಮೋದನೆ ಕೋರಿ ಘನ ಸರ್ಕಾರಕ್ಕೆ ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಪತ್ರ ಸಂಖ್ಯೆ: ಕಾಪಾಅ-3/ಘತ್ಯಾನಿ-1 ಪಿಆರ್/237/2018-19 ದಿನಾಂಕ: 7-11-2018 ರಂತೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

3. ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ನಿರ್ವಹಣಾ ಕಾರ್ಯಾಚರಣೆಗೆ 198 ವಾರ್ಡ್‌ಗಳಲ್ಲಿ ವಾರ್ಷಿಕ ರೂ.8,48,77,164/-ಗಳ ವೆಚ್ಚದಲ್ಲಿ 240 ಕ್ಲೀನ್ ಅಪ್ ಮಾರ್ಷಲ್‌ಗಳನ್ನು

ಹಾಗೂ ಅಧಿಕಾರಿಗಳ ಸೇವೆಯನ್ನು Karnataka Ex-Serviceman Welfare Society(R)ರವರಿಂದ ನೇರವಾಗಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿ ನಿಯಮ 1999 ಕಲಂ 4(ಜಿ) ಅಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ನಗರಾಭಿವೃದ್ಧಿ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿ, ಸರ್ಕಾರದ ಅಧಿಸೂಚನೆ ಸಂಖ್ಯೆ:ಆಇ 515 ವೆಚ್ಚ-12/19 ದಿನಾಂಕ: 28-05-2019ರಂತೆ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಅದರಂತೆ ಪಾಲಿಕೆಯ ವತಿಯಿಂದ Karnataka Ex-Serviceman welfare society(R)ರವರಿಗೆ ದಿನಾಂಕ:01-09-2019 ರಿಂದ 1 ವರ್ಷದ ಅವಧಿಗೆ ಮಾರ್ಷಲ್‌ಗಳನ್ನು ರೂ.8,30,68,578/- ಗಳಿಗೆ ಪೂರೈಸಲು ಕಾರ್ಯಪಾಲಕ ಅಭಿಯಂತರರು-3 ರವರ ಕಾರ್ಯಾದೇಶ ಸಂಖ್ಯೆ:ಕಾಪಾಅ-3/ಎಸ್‌ಡಬ್ಲೂಎಂ-1/ಪಿಆರ್/237/2018-19 ದಿನಾಂಕ:23-08-2019ಹಾಗೂ ಕಾರ್ಯಪಾಲಕ ಅಭಿಯಂತರರು-3 ರವರ ಒಡಂಬಡಿಕೆ ಸಂಖ್ಯೆ: ಕಾಪಾಅ-3/ಎಸ್‌ಡಬ್ಲೂಎಂ-1/ಅಗ್/237/2018-19 ದಿನಾಂಕ:23-08-2019ರಂತೆ ಕಾರ್ಯಾದೇಶ ನೀಡಲಾಗಿದ್ದು, ಒಡಂಬಡಿಕೆ ಮಾಡಿಕೊಳ್ಳಲಾಗಿರುತ್ತದೆ.

4. ಪಾಲಿಕೆಯಲ್ಲಿ ಕೋವಿಡ್-19, ಕರ್ತವ್ಯ ನಿರ್ವಹಣೆಗೆ ಅಗತ್ಯವಿರುವ ಹೆಚ್ಚುವರಿ ಮಾರ್ಷಲ್‌ಗಳನ್ನು ನಿಯೋಜಿಸಿಕೊಳ್ಳುವ ಅಗತ್ಯತೆಯಿದ್ದು, 31 ಮಾರ್ಷಲ್‌ಗಳು ಹಾಗೂ 10 ಜೆಸಿಓ ಗಳನ್ನು ಹೆಚ್ಚುವರಿಯಾಗಿ ನಿಯೋಜಿಸಿಕೊಳ್ಳಲು ಕಾರ್ಯಪಾಲಕ ಅಭಿಯಂತರರು-3 ರವರ ಮುಂದುವರೆದ ಕಾರ್ಯಾದೇಶ ಸಂಖ್ಯೆ: ಕಾಪಾಅ-3/ಎಸ್‌ಡಬ್ಲೂಎಂ-1/ಪಿಆರ್/10/2018-19 ದಿನಾಂಕ:08-06-2020 ರಂತೆ ಕಾರ್ಯಾದೇಶ ನೀಡಲಾಗಿದ್ದು, ಒಡಂಬಡಿಕೆ ಮಾಡಿಕೊಳ್ಳಲಾಗಿರುತ್ತದೆ.

5. ಕಾರ್ಯಪಾಲಕ ಅಭಿಯಂತರರು-3 ರವರ ಮುಂದುವರೆದ ಕಾರ್ಯಾದೇಶ ಸಂಖ್ಯೆ: ಕಾಪಾಅ-3/ ಎಸ್‌ಡಬ್ಲೂಎಂ-1/ಪಿಆರ್/1002/2018-19 ದಿನಾಂಕ:28-12-2020ರಂತೆ ವಾರ್ಡ್‌ಗಳಲ್ಲಿ ಮಾರ್ಷಲ್‌ಗಳ ಸೇವೆಯನ್ನು ದಿನಾಂಕ 01-09-2020 ರಿಂದ 4 ಮಾಹೆಗಳ ಅವಧಿಗೆ ಮುಂದುವರೆಸಲು ಕಾರ್ಯಾದೇಶ ನೀಡಲಾಗಿರುತ್ತದೆ. ಮಾರ್ಷಲ್‌ಗಳ ಮಾಸಿಕ ವೇತನಗಳನ್ನು ಹೆಚ್ಚು ಮಾಡಿ ಮುಂದುವರೆಸಲು 4(ಜಿ) ವಿನಾಯಿತಿ ಕೋರುವ ಸಂಬಂಧ ಬರೆಯಲಾದ ಮನವಿಗೆ ಸರ್ಕಾರದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆಯ ರವರ ಪತ್ರ ಸಂಖ್ಯೆ: ನಅಇ 153 ಎಂಎನ್‌ವೈ 2020 ದಿನಾಂಕ:19-10-2020ರ ಪತ್ರದಲ್ಲಿ ಪಾಲಿಕೆಯ ಸಂಪನ್ಮೂಲದಲ್ಲಿ ವೇತನ ಭರಿಸಲು ಸೂಚಿಸಲಾಗಿರುತ್ತದೆ.

6. ಸದರಿ ಮಾರ್ಷಲ್ ಗಳನ್ನು ಘನತ್ಯಾಜ್ಯ ನಿರ್ವಹಣೆಯ ಕಾರ್ಯಗಳ ಜೊತೆಜೊತೆಗೆ ಕೋವಿಡ್ ಕೇರ್ ಸೆಂಟರ್, ಕೋವಿಡ್ ಬಿಹೇವಿಯರ್ ಮೇಲ್ವಿಚಾರಣೆ, ಮಾರುಕಟ್ಟೆಗಳ ಸ್ವಚ್ಛತೆ ನಿರ್ವಹಣೆ, ಸ್ವಚ್ಛ ಸರ್ವೇಕ್ಷಣೆಗೆ ಸಂಬಂಧದಿಂದ ಮಾಹಿತಿಗಳು ಹಾಗೂ ಇತರೆ ಕಾರ್ಯಗಳ ನಿರ್ವಹಣೆಗೆ ಅಗತ್ಯವಿರುವುದರಿಂದ, ಕಾರ್ಯಪಾಲಕ ಅಭಿಯಂತರರು-3 ರವರ ಮುಂದುವರೆದ ಕಾರ್ಯಾದೇಶ ಸಂಖ್ಯೆ:ಕಾಪಾಅ-3/ಎಸ್‌ಡಬ್ಲೂಎಂ-1/ಪಿಆರ್/1706/2018-19 ದಿನಾಂಕ:15-03-2021ರ ಮುಂದುವರೆದ ಕಾರ್ಯಾದೇಶದಂತೆ 398 ಮಾರ್ಷಲ್‌ಗಳ, 22 ಜೆಸಿಓಗಳು ಹಾಗೂ 1 ಡಿಸಿಎಂ ಗಳನ್ನು ನಿಯೋಜಿಸಿಕೊಳ್ಳಲು ರೂ.15,64,35,072/- ಮೊತ್ತಕ್ಕೆ ದಿನಾಂಕ:01-01-2021 ರಿಂದ ಮುಂದಿನ ಆದೇಶದವರೆಗೆ ನೀಡಲಾಗಿರುತ್ತದೆ. ಪಾಲಿಕೆಯ ವ್ಯಾಪ್ತಿಯಲ್ಲಿ 198 ವಾರ್ಡ್‌ಗಳಿಂದ 243 ವಾರ್ಡ್‌ಗಳಾಗಿ

ವಿಂಗಡಣೆಯಾದ ಬಳಿಕ ಹೆಚ್ಚುವರಿಯಾಗಿ 20 ಮಾರ್ಷಲ್‌ಗಳು ಹಾಗೂ 9 ಜೆಸಿಬಿ ಗಳನ್ನು ನಿಯೋಜಿಸಿಕೊಳ್ಳುವ ಅಗತ್ಯತೆ ಕಂಡುಬಂದಿದ್ದು, ಅದರಂತೆ ಕಾರ್ಯಪಾಲಕ ಅಭಿಯಂತರರು-3 ರವರ ಕಾರ್ಯಾದೇಶ ಸಂಖ್ಯೆ: ಕಾಪಾಅ-3/ಎಸ್‌ಡಬ್ಲೂಎಂ/ಕಾ.ಆ/1942/2018-19 ದಿನಾಂಕ:30-09-2022 ರೀತ್ಯಾ ದಿನಾಂಕ:01-10-2022 ರಿಂದ ಮುಂದಿನ ಆದೇಶದವರೆಗೆ ಮಾರ್ಷಲ್‌ಗಳು ಹಾಗೂ ಜೆಸಿಬಿಗಳನ್ನು ಪೂರೈಸಲು/ ನಿಯೋಜಿಸಲು ಕಾರ್ಯಾದೇಶ ನೀಡಲಾಗಿರುತ್ತದೆ.

7. ಅದಲ್ಲದೇ, ಘನ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:ದಿನಾಂಕ:6-04-2018ರ ದೈನಂದಿನ ವಿಚಾರಣೆಯ ಆದೇಶದಲ್ಲಿ ಮಾರ್ಷಲ್‌ಗಳನ್ನು ನಿಯೋಜಿಸಿಕೊಳ್ಳಲು ಸೂಚಿಸಲಾಗಿರುತ್ತದೆ. ಅದರಂತೆ ಪಾಲಿಕೆಯ 7 ಸಂಸ್ಕರಣಾ ಘಟಕಗಳಲ್ಲಿ ( ಕನ್ನಹಳ್ಳಿ, ಸೀಗೇಹಳ್ಳಿ, ಲಿಂಗದೀರನಹಳ್ಳಿ, ಸುಬ್ಬರಾಯನ ಪಾಳ್ಯ, ಚಿಕ್ಕನಾಗಮಂಗಲ, ದೊಡ್ಡಬಿದರೆಕಲ್ಲು, ಮಾವಳ್ಳಿಪುರ ಮತ್ತು ಕೆ.ಸಿ.ಡಿ.ಸಿ) ಗಳಲ್ಲಿ ನಿವೃತ್ತ ಸೇನಾ ಸಿಬ್ಬಂದಿಗಳನ್ನು ಮಾರ್ಷಲ್‌ಗಳಾಗಿ ನಿಯೋಜಿಸಿಕೊಳ್ಳಲು ಸರ್ಕಾರದ ಅಧಿಸೂಚನೆ ಸಂಖ್ಯೆ:ಆಇ/1013/ವೆಚ್ಚ-12/18 ದಿನಾಂಕ: 28-09-2018ರ ಅಧಿಸೂಚನೆಯಂತೆ ಪಾಲಿಕೆಯ ಘನತ್ಯಾಜ್ಯ ಸಂಸ್ಕರಣಾ ಘಟಕಗಳಲ್ಲಿ ವಲಯ ಮಟ್ಟದಲ್ಲಿ ನಿಯೋಜಿಸಿಕೊಳ್ಳಲು ಜಂಟಿ ಆಯುಕ್ತರು (ಘತ್ಯಾನಿ) ರವರ ಪತ್ರ ಸಂಖ್ಯೆ:ಜ.ಆ(ಘತ್ಯಾನಿ)/ಪಿಆರ್/2974/2019-20 ದಿ:23-03-2020ರ ಪತ್ರದಲ್ಲಿ ನಿರ್ದೇಶನ ನೀಡಿರುವ ಮೇರೆಗೆ ವಲಯಗಳಲ್ಲಿ ಘನತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ 49 ಮಾರ್ಷಲ್‌ಗಳನ್ನು ನಿಯೋಜಿಸಿಕೊಳ್ಳಲಾಗಿರುತ್ತದೆ.

8. ಪಾಲಿಕೆಯ ವ್ಯಾಪ್ತಿಯ ಮಹದೇವಪುರ ವಲಯದ ಬೆಳ್ಳಂದೂರು ಮತ್ತು ವರ್ತೂರು ಕೆರೆಗಳಲ್ಲಿ ಅನಧಿಕೃತವಾಗಿ ಘನತ್ಯಾಜ್ಯ ಮತ್ತು ಕಟ್ಟಡ ಮತ್ತು ನಿರ್ಮಾಣಗಳ ಭಗ್ನಾವಶೇಷಗಳನ್ನು ಸುರಿಯುತ್ತಿದ್ದು, ಆಗ್ಗಿಂದಾಗೆ ಬೆಂಕಿ ಕೂಡ ಹಾಕುತ್ತಿದ್ದು ಇದರಿಂದ ವಾಯು, ಜಲ ಮತ್ತು ಭೂ ಮಾಲಿನ್ಯ ಉಂಟಾಗುತ್ತಿರುವ ಬಗ್ಗೆ ಸ್ಥಳೀಯರು ಪ್ರತಿಭಟಿಸಿ ವರ್ತೂರು ಕೆರೆಗೆ ಸಂಬಂದಿಸಿದ ಘನ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ಪ್ರಕರಣ ಸಂಖ್ಯೆ: ಓಎ 217/2017 ಮತ್ತ ಬೆಳ್ಳಂದೂರು ಕೆರೆಗೆ ಸಂಬಂದಿಸಿದ ಘನ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ಪ್ರಕರಣಸಂಖ್ಯೆ: ಓಎ 125/2017ರಲ್ಲಿ ಸೂಚಿಸಲಾದ ಎರಡು ವಿವಿಧ ಪ್ರಕರಣಗಳಲ್ಲಿ ಘನ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ಮೊರೆಹೋಗಿದ್ದು, ಘನ ನ್ಯಾಯಾಲಯವು ಕೆರೆಗಳ ಸಂರಕ್ಷಣೆ ಮಾಡಲು ಸೂಚಿಸಲಾಗಿರುತ್ತದೆ. ಅದರಂತೆ ವರ್ತೂರು ಕೆರೆಯ ಸಂರಕ್ಷಣೆಗೆ ಒಂದು ಪಾಳಿಯಲ್ಲಿ 6 ರಂತೆ ಮೂರು ಪಾಳಿಯಲ್ಲಿ 18 ಮಾರ್ಷಲ್‌ಗಳು ಒಬ್ಬ ಜೂನಿಯರ್ ಕಮಿಷನರ್ ಹಾಗೂ ಮೂರು ಚಾಲಕರನ್ನು ನಿಯೋಜಿಸಿಕೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಹದೇವಪುರರವರ ಕಾರ್ಯಾದೇಶ ಸಂಖ್ಯೆ:ಬಿಬಿಎಂಪಿ/ಸಕಾಅ(ಘತ್ಯಾನಿ)/ಮ.ವಿ/ಪಿಆರ್/19/2020-2 ದಿ:17-11-2020ರಂತೆ ಕಾರ್ಯಾದೇಶ ನೀಡಲಾಗಿರುತ್ತದೆ. ಹಾಗೂ ಬೆಳ್ಳದೂರು ಕೆರೆಯ ಸಂರಕ್ಷಣೆಗೆ ಒಂದು ಪಾಳಿಯಲ್ಲಿ 6 ರಂತೆ ಮೂರು ಪಾಳಿಯಲ್ಲಿ 18 ಮಾರ್ಷಲ್‌ಗಳು ಒಬ್ಬ ಚೀಫ್ ಮಾರ್ಷಲ್ ನಿಯೋಜಿಸಿಕೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಹದೇವಪುರರವರ ಕಾರ್ಯಾದೇಶ ಸಂಖ್ಯೆ: ಬಿಬಿಎಂಪಿ/ ಸಕಾಅ(ಘತ್ಯಾನಿ)/ಮ.ವಿ/ಪಿಆರ್/19/2020-21 ದಿನಾಂಕ:22-02-2018ರಂತೆ ಕಾರ್ಯಾದೇಶ ನೀಡಲಾಗಿರುತ್ತದೆ.

9. ಘನತ್ಯಾಜ್ಯ ಭೂಭರ್ತಿ ನಿವೇಶನಗಳಲ್ಲಿ ಅನಧಿಕೃತವಾಗಿ ಘನ ತ್ಯಾಜ್ಯ ಮತ್ತು ಪ್ರಾಣಿತ್ಯಾಜ್ಯ ಸುರಿಯುವುದನ್ನು ತಡೆಗಟ್ಟಲು ಮಾರ್ಷಲ್‌ಗಳನ್ನು ಕಾರ್ಯಪಾಲಕ ಅಭಿಯಂತರರು,(ಘತ್ಯಾನಿ-ಭೂಭರ್ತಿ)ರವರ ಕಛೇರಿ ಪತ್ರ

ಸಂ:ಕಪಅ/ಘತ್ಯಾನಿ/ಪಿ.ಆರ್/10/17-18 ದಿನಾಂಕ 08-01-2018ರ ಪತ್ರದಂತೆ ಅದಾಗಲೇ ಕೆಆರಐಡಿಎಲ್ ವತಿಯಿಂದ ನಿಯೋಜಿಸಲಾಗಿದ್ದ 18 ಮಾರ್ಷಲ್ಸ್‌ಗಳ ಜೊತೆಗೆ 2 ಗನ್‌ಮ್ಯಾನ್‌ಗಳನ್ನೊಳಗೊಂಡಂತೆ 6 ಮಾರ್ಷಲ್‌ಗಳನ್ನು ಹೆಚ್ಚುವರಿಯಾಗಿ ಪೂರೈಸಿಕೊಡಲು ಪತ್ರ ಬರೆಯಲಾಗಿದ್ದು, ಒಟ್ಟು 24 ಮಾರ್ಷಲ್‌ಗಳನ್ನು ನಿಯೋಜಿಸಿಕೊಳ್ಳಲಾಗಿರುತ್ತದೆ.

10. ಮೇಲಿನ ಕಂಡಿಕೆಗಳಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿ ಮಾರ್ಷಲ್‌ಗಳನ್ನು ವಿವಿಧ ಸೇವೆಯಲ್ಲಿ ನಿಯೋಜಿಸಲಾಗಿದ್ದು, ಮಾರ್ಷಲ್‌ಗಳ ಸೇವೆಯು ಪಾಲಿಕೆಯಲ್ಲಿ ಅತ್ಯಾವಶ್ಯಕವಾಗಿರುತ್ತದೆ ಮಾರ್ಷಲ್‌ಗಳ ಸೇವೆಯನ್ನು ಈ ಕೆಳಕಂಡಂತೆ ನಿಯೋಜಿಸಲಾಗಿರುತ್ತದೆ.

    1. ವಾರ್ಡ್‌ಗಳಲ್ಲಿ ಬೆಳಗ್ಗೆ ಆಟೋಗಳು ಹಾಗೂ ಪೌರಕಾರ್ಮಿಕರ ಹಾಜರಾತಿ ಉಸ್ತುವಾರಿ.
    2. ಬ್ಲಾಕ್ ಸ್ಪಾಟ್‌ಗಳಲ್ಲಿ ಸ್ವಚ್ಛತೆಯ ಉಸ್ತುವಾರಿ.
    3. ವಾರ್ಡ್‌ಗಳಲ್ಲಿ ಸ್ವಚ್ಛತೆಯ ಉಸ್ತುವಾರಿ.
    4. ರಸ್ತೆಗಳು ಸ್ವಚ್ಛತೆಯ ಬಗ್ಗೆ ನಿರ್ಹಹಣೆಯ ಜವಾಬ್ದಾರಿ.
    5. ಮಾರುಕಟ್ಟೆಯಲ್ಲಿ ಸ್ವಚ್ಛತೆಯ ಬಗ್ಗೆ ನಿರ್ವಹಣೆ.
    6. ಕೋವಿಡ್ -19 ರಂತಹ ತುರ್ತು ಪರಿಸ್ಥಿತಿಯ ನಿರ್ವಹಣೆ.
    7. ಸ್ವಚ್ಛ ಸರ್ವೇಕ್ಷಣೆಯ ನಿರ್ವಹಣೆ.
    8. ಬೆಳ್ಳಂದೂರು ಹಾಗೂ ವರ್ತೂರು ಕೆರೆಯಲ್ಲಿ ಅನಧಿಕೃತ ತ್ಯಾಜ್ಯ ಸುರಿಯುವುದನ್ನು ತಡೆಗಟ್ಟುವುದು.

11. ಘನತ್ಯಾಜ್ಯ ಭೂ ಭರ್ತಿ ನಿವೇಶನಗಳಲ್ಲಿ ಮಾರ್ಷಲ್‌ಗಳ ನಿಯೋಜನೆ. ಪ್ರಸ್ತುತ ಪಾಲಿಕೆಯಲ್ಲಿ ಮಾರ್ಷಲ್‌ಗಳು ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ವರೆಗೆ ದಂಡ ಮೊತ್ತ **ರೂ.27.33 ಕೋಟಿ**ಗಳನ್ನು ವಿವಿಧ ಪ್ರಕರಣಗಳಲ್ಲಿ ವಿಧಿಸಿ ವಸೂಲಾತಿ ಮಾಡಿರುತ್ತಾರೆ. ಪಾಲಿಕೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಮಾರ್ಷಲ್‌ಗಳು, ಜೆಸಿಓಗಳು ಹಾಗೂ ಇತರೆ ಅಧಿಕಾರಿಗಳು ವಿವರಗಳು ಈ ಕೆಳಕಂಡಂತಿರುತ್ತದೆ.

    1. ವಾರ್ಡ್‌ನಲ್ಲಿ ಆಟೋಗಳು ಹಾಗೂ ಪೌರಕಾರ್ಮಿಕರ ಹಾಜರಾತಿ, ಘನತ್ಯಾಜ್ಯ ನಿರ್ವಹಣಾ ನಿಯಮ, 2016 ಮತ್ತು ಉಪನಿಯಮ 2020 ರಂತೆ ದಂಡ ವಿಧಿಸಲು ವಾರ್ಡ್‌ಗೆ ಒಬ್ಬರು ಅಥವಾ ಇಬ್ಬರಂತೆ ಕಾರ್ಯ ನಿರ್ವಹಿಸುತ್ತಿರುವ ಮಾರ್ಷಲ್‌ಗಳ ಸಂಖ್ಯೆ 419 ಮತ್ತು 31 ಜೆಸಿಓ.
    2. ಭೂಭರ್ತಿ ನಿವೇಶನಗಳಲ್ಲಿ 2 ಗನ್ ಮ್ಯಾನ್ ಗಳು ಮತ್ತು 22 ಮಾರ್ಷಲ್‌ಗಳು ಸೇರಿದಂತೆ ಒಟ್ಟು 24 ಮಾರ್ಷಲ್‌ಗಳು.
    3. ಘನತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ ಅವಶ್ಯಕವಿರುವ 49 ಸಂಖ್ಯೆ ಮಾರ್ಷಲ್‌ಗಳು.
    4. ಪಾಲಿಕೆಯ ವ್ಯಾಪ್ತಿಯಲ್ಲಿ ಕೆರೆಗಳ ಸಂರಕ್ಷಣೆಗೆ ನಿಯೋಜಿಸಲಾದ ಮಾರ್ಷಲ್‌ಗಳು 36, 1 ಜೂನಿಯರ್ ಕಮಿಷನರ್, 1 ಚೀಫ್ ಮಾರ್ಷಲ್ ಹಾಗೂ 3 ಚಾಲಕರು.

ಸದರಿಯವರ ಸೇವೆಯನ್ನು ಪಡೆಯಲು ತಗಲುತ್ತಿರುವ ಮಾಹೆಯಾನ ವೆಚ್ಚವನ್ನು ಈ ಕೋಷ್ಟಕದಲ್ಲಿ ನಮಾದಿಸಿದೆ.

| S No | Heads | Dy Chief Marshal | Supervisor | Marshals | Remuneration per person per month (In Rupees) | | | Total | GST 18 % | Grand Total |
|---|---|---|---|---|---|---|---|---|---|---|
| | | | | | Dy Chief Marshal | Supervisor | Marshals | | | |
| 1 | Marshals in wards | 1 | 22 | 398 | 97225.00 | 45475.00 | 25000.00 | 11047675.00 | 1988581.50 | 13036256.50 |
| | | | 9 | 20 | | 35000.00 | 25000.00 | 815000.00 | 146700.00 | 961700.00 |
| 2 | Landfill | | | 24 | | | 28987.50 | 695700.00 | 125226.00 | 820926.00 |
| 3 | Plants | | | 49 | | | 25417.00 | 1245433.00 | 224177.94 | 1469610.94 |
| 4 | Lakes | | 2 | 42 | | 45475.00 | 29462.50 | 1328375.00 | 239107.50 | 1567482.50 |
| | Total | 1 | 33 | 533 | | | | 15132183.00 | 2723792.94 | 17855975.94 |

ಮಾರ್ಷಲ್‌ಗಳ ಸೇವೆಯ ಅಗತ್ಯತೆ ಕುರಿತಂತೆ ಈ ಕೆಳಕಂಡ ವಿಷಯವನ್ನು ತಮ್ಮ ಅವಗಾಹನೆಗೆ ಮಂಡಿಸಿದೆ

12. ಪಾಲಿಕೆ ವ್ಯಾಪ್ತಿಯಲ್ಲಿ ತ್ಯಾಜ್ಯ ನಿರ್ವಹಣೆ ಕುರಿತಂತೆ ಮಾನ್ಯ ಉಚ್ಚ ನ್ಯಾಯಾಲಯದಿಂದ ಹಲವಾರು ನಿರ್ದೇಶನಗಳು ಬಂದಿದ್ದು, 2013 ರಲ್ಲಿ ತ್ಯಾಜ್ಯ ನಿರ್ವಹಣೆ ಕುರಿತಂತೆ ಕರ್ನಾಟಕ ಮುನ್ಸಿಪಲ್ ಕಾಯ್ದೆಗೆ ತಿದ್ದುಪಡಿ ತರಲಾಗಿರಿತ್ತದೆ. ಅದರಂತೆ ಸಾರ್ವಜನಿಕರು ಎಲ್ಲಂದರಲ್ಲಿ ತ್ಯಾಜ್ಯ ಬಿಸಾಡಿದಲ್ಲಿ, ತ್ಯಾಜ್ಯ ವಿಂಗಡಣೆ ಮಾಡದಿದ್ದಲ್ಲಿ, ಉಗುಳಿದಲ್ಲಿ ಮತ್ತಿತರ ಕಾನೂನು ಬಾಹಿರ ಚಟುವಟಿಕೆಗಳಿಗೆ ದಂಡ ವಿಧಿಸುವ ನಿಯಮವನ್ನು ಜಾರಿಗೊಳಿಸಲಾಗುತ್ತಿದ್ದು ಹಾಗೂ ದಂಡ ವಿಧಿಸುವ ಅಧಿಕಾರವನ್ನು ಸಂಬಂದಪಟ್ಟ ವಾರ್ಡ್‌ಗಳ ಆರೋಗ್ಯ ಪರಿವೀಕ್ಷಕರು, ಸಹಾಯಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರವರಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡಲಾಗಿರುತ್ತದೆ.

13. ಮುಂದುವರೆದಂತೆ. 2016 ರಲ್ಲಿ ಕರ್ನಾಟಕ ಸರ್ಕಾರವು ಪ್ಲಾಸ್ಟಿಕ್ ಕ್ಯಾರಿಬ್ಯಾಗ್ ಇತ್ಯಾದಿಗಳ ಉಪಯೋಗವನ್ನು ನಿಷೇಧಿಸಿ ಅಧಿಸೂಚನೆ ಹೊರಡಿಸಿದ್ದು, ಸದರಿ ಅಧಿಸೂಚನೆಯನ್ನು ಜಾರಿಗೊಳಿಸಲು ಪ್ಲಾಸ್ಟಿಕ್ ಬಳಸುವ ಸಾರ್ವಜನಿಕರು ಮತ್ತು ಅಂಗಡಿಗಳು ಇತ್ಯಾದಿ ರವರಿಗೆ ದಂಡ ವಿಧಿಸುವ ನಿಯಮ ಜಾರಿಗೊಳಿಸಲಾಗಿರುತ್ತದೆ. ಆದರೆ ಸದರಿ ದಂಡಗಳನ್ನು ಪಾಲಿಕೆಯ ಅಧಿಕಾರಿ ವರ್ಗದಿಂದ ವಿಧಿಸಿ ಸಂಪೂರ್ಣವಾಗಿ ಹತೋಟಿಗೆ ತರಲು ಸಾದ್ಯವಾಗಿರುವುದಿಲ್ಲ. ನಗರವನ್ನು ಸಂಪೂರ್ಣವಾಗಿ ಸ್ವಚ್ಚವಾಗಿಡಲು ಮತ್ತು ಸಾರ್ವಜನಿಕರಿಗೆ ದಂಡ ವಿಧಿಸಲು ದೈನಂದಿನ ಉಸ್ತುವಾರಿ ನಡೆಸುವ ಅಗತ್ಯತೆಯಿರುತ್ತದೆ. ಆದುದರಿಂದ ನಗರವನ್ನು ಸ್ವಚ್ಚತೆಯಲ್ಲಿ ವಿವಿಧ ಅಪರಾಧಗಳಿಗೆ ದಂಡ ವಿಧಿಸುವ ಸಲುವಾಗಿ ನಿವೃತ್ತಿ ಸೇನಾ ಸಿಬ್ಬಂದಿಗಳನ್ನು ಮಾರ್ಷಲ್‌ಗಳನ್ನಾಗಿ ನೇವಿಸುವುದು ಸೂಕ್ತವಾಗಿರುತ್ತದೆ. ಈ ಕುರಿತಂತೆ ದಿನಾಂಕ:23-06-2016 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP ಸಂಖ್ಯೆ:24739/2012 ಅರ್ಜಿ ವಿಚಾರಣೆ ವೇಳೆಯಲ್ಲಿ ವಾರ್ಡ್‌ಗಳಲ್ಲಿ 2-3 ಸಂಖ್ಯೆ ಕ್ಲೀನ್‌ಅಪ್ ಮಾರ್ಷಲ್‌ರವರನ್ನು ನಿವೃತ್ತ ಸೇನಾ ಪಡೆಯಿಂದ ಪಡೆದು ನಿಯಮ ಉಲ್ಲಂಘಿಸುವ ಸಾರ್ವಜನಿಕರ ಮೇಲೆ ದಂಡ ವಿದಿಸಲು ನೇವಿಸಲು ಸೂಚಿಸಲಾಗಿರುತ್ತದೆ.

14. ಇದಲ್ಲದೆ ಭೂಭರ್ತಿ, ಘನತ್ಯಾಜ್ಯ ಸಂಸ್ಕರಣಾ ಘಟಕಗಳು ಹಾಗು ಪಾಲಿಕೆಯ ವ್ಯಾಪ್ತಿಯಲ್ಲಿ ಕೆರೆಗಳು ಇತ್ಯಾದಿ ಪ್ರದೇಶಗಳಲ್ಲಿ ಸಾರ್ವಜನಿಕರಿಂದ ಪ್ರತಿರೋದ ತಡೆಗಟ್ಟಲು, ಅನಧಿಕೃತ ವಿಲೇವಾರಿ ಕಾರ್ಯಗಳನ್ನು ತಡೆಗಟ್ಟಲು ಮಾರ್ಷಲ್ ಸೇವೆ ಅತ್ಯಗತ್ಯವಾಗಿರುತ್ತದೆ.

15. ಈ ಕುರಿತಂತೆ ಈಗಾಗಲೇ ಸರ್ಕಾರದ ಅಧಿಸೂಚನೆ ಸಂಖ್ಯೆ:ಆಇ 515 ವೆಚ್ಚ-12/19 ದಿನಾಂಕ:28-05-2019 ರಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿ ನಿಯಮ 1999 ಕಲಂ 4(ಜಿ) ರಡಿಯಲ್ಲಿ ಮೊದಲು ಒಂದು ವರ್ಷದ ಅವಧಿಗೆ ವಿನಾಯತಿಯನ್ನು ಪಡೆಯಲಾಗಿರುತ್ತದೆ. ತದನಂತರ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ದಿ ಇಲಖೆಯ ರವರ ಪತ್ರ ಸಂಖ್ಯೆ:ನಅಇ 153 ಎಂಎನ್‌ವೈ 2020 ದಿನಾಂಕ:19-10-2020ರಲ್ಲಿ ಸರ್ಕಾರದ ಪತ್ರದಲ್ಲಿ ತಿಳಿಸಿರುವಂತೆ ಹಾಗೂ ಮಾರ್ಷಲ್ ಸೇವೆ ಅತ್ಯಗತ್ಯವಾಗಿರುವುದರಿಂದ ಪಾಲಿಕೆಯ ಸಂಪನ್ಮೂಲದಲ್ಲಿ ಈ ಹಿಂದೆ ಮಾನ್ಯ ಆಯುಕ್ತರವರ

ಅನುಮೋದನೆ ಪಡೆದು ಸೇವೆಯನ್ನು ಮುಂದುವರೆಸಲಾಗಿರುತ್ತದೆ. ಇದಲ್ಲದೆ ಪ್ರತಿ ಮಹೆಯ ಬಿಲ್‌ನ್ನು ಸಹ ಮಾನ್ಯ ಆಯುಕ್ತರವರ ಅನುಮೊದನೆ ಪಡೆದು ಪಾವತಿಸಲಾಗಿರುತ್ತದೆ.

ಪಾಲಿಕೆಯಲ್ಲಿ 533 ಸಂಖ್ಯೆ ಮಾರ್ಷಲ್‌ಗಳು, 33 ಸಂಖ್ಯೆ ಜೆಸಿಒಗಳು, 01 ಚೀಫ್ ಮಾರ್ಷಲ್ ಹಾಗೂ 01 ಡಿಸಿಎಂ ಅಥವಾ ಜೂನಿಯರ್ ಕಮಿಷನರ್‌ಗಳು ವಿವಿಧ ಕಾರ್ಯ ಆದೇಶಗಳನ್ವಯ ಕಾರ್ಯ ನಿರ್ವಹಿಸುತ್ತಿದ್ದು, ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರುತ್ತಾ, ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಫೀಲು ಸ್ಥಾಯಿ ಸಮಿತಿ, ಸಾರ್ವಜನಿಕ ಆರೋಗ್ಯ, ಘನತ್ಯಾಜ್ಯ ಮತ್ತು ವಿಪತ್ತು ನಿರ್ವಹಣೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ) ರವರ ದಿನಾಂಕ:24-05-2023ರ ಟಿಪ್ಪಣಿ.

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅನುಮೋದನೆ ದಿನಾಂಕ:02-03-2021ರನ್ವಯ ದಿನಾಂಕ:01-01-2021 ರಿಂದ 31-03-2023ರವರೆಗೆ ಒಟ್ಟು 421 (ಮುಖ್ಯ ಮಾರ್ಷಲ್-01, ಸೂಪರವೈಸರ್-22 ಮತ್ತು ಮಾರ್ಷಲ್ಸ್-398) ಜನರ ಮಾನವ ಸಂಪನ್ಮೂಲವನ್ನು ನಿಯೋಜಿಸಿಕೊಂಡು ಪಾವತಿಸಿದ ವೇತನಕ್ಕೆ ಮಾನ್ಯ ಕೌನ್ಸಿಲ್ ಸಭೆಯ ಸ್ಥಿರೀಕರಣ/ಪೋಸ್ಟ ಫ್ಯಾಕ್ಟೊ ಅನುಮೋದನೆ.
2. ಸದರಿ ಮಾರ್ಷಲ್‌ಗಳ ಸೇವೆಯನ್ನು ದಿನಾಂಕ:01.04.2023 ರಿಂದ 31.08.2023(ಮಾನ್ಯ ಕೌನ್ಸಿಲ್ ಸಭೆಯ ಅಧಿಕಾರ ವ್ಯಾಪ್ತಿಗೊಳಪಡುವ **05 ಮಾಹೆಗಳು**) ರವರೆಗೆ ಮುಂದುವರೆಸಲು.
3. ಮುಂದಿನ ಅವಧಿಗೆ ಸೇವೆಯ ವಿಸ್ತರಣೆಗಾಗಿ ಸದರಿ ಐದು ಮಾಹೆಗಳೊಳಗಾಗಿ ಪಾರದರ್ಶಕ ಕಾಯ್ದೆ 1999(ನಿಯಮಗಳು 2000)ಯ ಕಲಂ 4(ಜಿ)ರಡಿ ವಿನಾಯಿತಿಯನ್ನು ಮತ್ತು ವೆಚ್ಚವನ್ನು ಪಾಲಿಕೆಯಿಂದ ಅಯವ್ಯಯದ ಸಂಖ್ಯೆ 06-210908 ಪಿ-3228ರಲ್ಲಿ ಭರಿಸಲು ಘನ ಸರ್ಕಾರದ ಅನುಮೋದನೆ ಪಡೆಯಲು.
4. ಪ್ರಸ್ತುತ ಐದು ಮಾಹೆಗಳ ವೇತನವನ್ನು ಪಾವತಿಸಲು ಅಗತ್ಯವಿರುವ Monthly payment ಮೊತ್ತ ರೂ.1,78,55,976/- (One Crore Seventy Eight Lakh Fifty Five Thousand and Nine Hundred and Seventy Six only)ಗಳನ್ನು ಪಾಲಿಕೆಯ 2023-2024ರ ಸಾಲಿನ ಅಯವ್ಯಯದ ಸಂಖ್ಯೆ 06-210908 ಪಿ-3228 "ಮಾರ್ಷಲ್‌ಗಳಿಗೆ ಗೌರವಧನ" ರಡಿಯಲ್ಲಿ ಕಾಯ್ದಿರಿಸಿರುವ 3600.00ಲಕ್ಷಗಳು ಅನುದಾನದಡಿಯಲ್ಲಿ ಭರಿಸಿ ಪಾವತಿಸಲು ಅನುಮೋದನೆ.

**ತೀರ್ಮಾನ: ವಿಶೇಷ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ) ರವರ ದಿನಾಂಕ: 24-05-2023ರ ಟಿಪ್ಪಣಿಯನ್ನು ಒಪ್ಪಿದೆ.**

(ರಾಕೇಶ್ ಸಿಂಗ್)
ಆಡಳಿತಗಾರರು

## ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: ೧೯ -೦೬ - 2023ರ ನಡವಳಿಗಳು

**ವಿಷಯ ಸಂಖ್ಯೆ: 26 /2023-24**

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ: ಆಇ 9 ಎಸ್ ಆರ್ ಪಿ 2023 ದಿನಾಂಕ:30-05-2023ರ ಸರ್ಕಾರದ ಆರ್ಥಿಕ ಇಲಾಖೆಯು ನಡವಳಿ ಆದೇಶದಲ್ಲಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿರುತ್ತದೆ.

"2018 ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನವನ್ನು ಪಡೆಯುತ್ತಿರುವ ರಾಜ್ಯ ಸರ್ಕಾರಿ ನೌಕರರುಗಳಿಗೆ 1ನೇ ಜನವರಿ 2023 ರಿಂದ ಜಾರಿಗೆ ಬರುವಂತೆ ತುಟ್ಟಿಭತ್ಯೆಯ ದರಗಳನ್ನು ಪ್ರಸ್ತುತ ಮೂಲ ವೇತನ ಶೇಕಡ 31ರಿಂದ ಶೇಕಡ 35ಕ್ಕೆ ಪರಿಷ್ಕರಿಸಿ ಮಂಜೂರು ಮಾಡಲು ಸರ್ಕಾರವು ಹರ್ಷಿಸುತ್ತದೆ.

2. ತುಟ್ಟಿಭತ್ಯೆಯ ಉದ್ದೇಶಕ್ಕಾಗಿ "ಮೂಲ ವೇತನ ಎಂದರೆ ಸರ್ಕಾರಿ ನೌಕರನ್ನು ಧಾರಣ ಮಾಡಿರುವ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿಯಲ್ಲಿ ಪಡೆಯುತ್ತಿರುವ ವೇತನ ಮತ್ತು ಅದರಲ್ಲಿ,

(ಅ). ವೇತನ ಶ್ರೇಣಿಯ ಗರಿಷ್ಠಕ್ಕಿಂತ ಹೆಚ್ಚಾಗಿ ಅವನಿಗೆ ಸ್ಥಗಿತ ವೇತನ ಬಡ್ತಿಯನ್ನು ನೀಡಲಾಗಿದ್ದರೆ, ಆ ಸ್ಥಗಿತ ವೇತನ ಬಡ್ತಿ.

(ಆ). 2018ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳ ನಿಯಮ 3(ಸಿ)ಯನ್ನು ಓದಿಕೊಂಡು 7ನೇ ನಿಯಮದ (3)ನೇ ಉಪನಿಯಮದ ಮೇರೆಗೆ ಅವನಿಗೆ ನೀಡಲಾದ ವೈಯಕ್ತಿಕ ವೇತನ ಯಾವುದಾದರೂ ಇದ್ದರೆ, ಆ ವೈಯಕ್ತಿಕ ವೇತನ.

(ಇ). ವೇತನ ಶ್ರೇಣಿಯ ಗರಿಷ್ಠಕ್ಕಿಂತ ಹೆಚ್ಚಾಗಿ ಅವನಿಗೆ ಮಂಜೂರು ಮಾಡಲಾಗಿರುವ ಹೆಚ್ಚುವರಿ ವೇತನ ಬಡ್ತಿ ಯಾವುದಾದರೂ ಇದ್ದಲ್ಲಿ ಅವುಗಳು ಸೇರುತ್ತವೆ.

3. ಮೂಲ ವೇತನಕ್ಕೆ ಮೇಲೆ ಸೂಚಿಸಿರುವುದನ್ನು ಹೊರತುಪಡಿಸಿ ಇತರೆ ಯಾವುದೇ ಉಪಲಬ್ಧಗಳನ್ನು ಸೇರಿಸತಕ್ಕದ್ದಲ್ಲ.

4. ರಾಜ್ಯ ಸರ್ಕಾರದ ನಿವೃತ್ತಿ ವೇತನದಾರರು/ಕುಟುಂಬ ನಿವೃತ್ತಿ ವೇತನದಾರರಿಗೆ ಮತ್ತು ರಾಜ್ಯದ ಸಂಚಿತ ನಿಧಿಯಿಂದ ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನವನ್ನು ಪಡೆಯುತ್ತಿರುವಂತಹ ಅನುದಾನಿತ ಶಿಕ್ಷಣ ಸಂಸ್ಥೆಗಳ ನಿವೃತ್ತಿ ವೇತನದಾರರು/ಕುಟುಂಬ ನಿವೃತ್ತಿ ವೇತನದಾರರಿಗೂ ಸಹ ದಿನಾಂಕ 1ನೇ ಜನವರಿ 2023 ರಿಂದ ಜಾರಿಗೆ ಬರುವಂತೆ ಹಾಲಿ ಲಭ್ಯವಿರುವ ತುಟ್ಟಿಭತ್ಯೆಯ ದರಗಳನ್ನು ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಪ್ರಸಕ್ತ ಶೇಕಡ 31 ರಿಂದ ಶೇಕಡ 35 ಕ್ಕೆ ಹೆಚ್ಚಿಸಿ ಮಂಜೂರು ಮಾಡಲು ಸಹ ಸರ್ಕಾರವು ಹರ್ಷಿಸುತ್ತದೆ.

5. ಯುಜಿಸಿ/ಎಐಸಿಟಿಆರ್/ಐಸಿಎಆರ್ ವೇತನ ಶ್ರೇಣಿಗಳ ನಿವೃತ್ತ ವೇತನದಾರರಿಗೂ ಸಹ ಈ ಆದೇಶಗಳು ಅನ್ವಯಿಸುತ್ತವೆ.

6. ಸರ್ಕಾರದ ಮತ್ತು ಜಿಲ್ಲಾ ಪಂಚಾಯತ್ ಗಳ ಪೂರ್ಣಾವಧಿ ನೌಕರರಿಗೆ, ಕಾಲಿಕ ವೇತನ ಶ್ರೇಣಿಗಳಲ್ಲಿರುವ ಪೂರ್ಣಾವಧಿ ವರ್ಕ್ ಚಾರ್ಜ್ ನೌಕರರಿಗೆ ಹಾಗೂ ಸರ್ಕಾರದಿಂದ ಸಹಾಯಾನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ಕಾಲಿಕ ವೇತನ ಶ್ರೇಣಿಗಳಲ್ಲಿರುವ ಪೂರ್ಣಾವಧಿ ನೌಕರರುಗಳಿಗೆ ಈ ಆದೇಶ ಅನ್ವಯಿಸುತ್ತದೆ.

7. ಯುಜಿಸಿ/ಎಐಸಿಟಿಇ/ಐಸಿಎಆರ್/ಎನ್ ಜೆಪಿಸಿ ವೇತನ ಶ್ರೇಣಿಗಳಲ್ಲಿ ಹಾಲಿ ವೇತನ ಪಡೆಯುತ್ತಿರುವ ನೌಕರರಿಗೆ ಮತ್ತು ಎನ್ ಜೆಪಿಸಿ ಪಿಂಚಣಿದಾರರಿಗೆ ಸಂಬಂಧಿಸಿದಂತೆ ಪ್ರತ್ಯೇಕ ಆದೇಶಗಳನ್ನು ಹೊರಡಿಸಲಾಗುವುದು.

8. ಈ ಆದೇಶದ ಮೇರೆಗೆ ಲಭ್ಯವಿರುವ ತುಟ್ಟಿಭತ್ಯೆಯನ್ನು ನಗದಾಗಿ ಪಾವತಿ ಮಾಡುವುದು.

9. ತುಟ್ಟಿಭತ್ಯೆಯ ಕಾರಣದಿಂದ ಸಂದಾಯ ಮಾಡಬೇಕಾಗಿರುವ ಐವತ್ತು ಪೈಸೆ ಹಾಗೂ ಅದಕ್ಕಿಂತ ಹೆಚ್ಚಿನ ಭಿನ್ನಾಂಕಗಳನ್ನು ಮುಂದಿನ ರೂಪಾಯಿಗೆ ಪೂರ್ಣಗೊಳಿಸತಕ್ಕದ್ದು ಮತ್ತು ಐವತ್ತು ಪೈಸೆಗಿಂತ ಕಡಿಮೆ ಇರುವ ಭಿನ್ನಾಂಕಗಳನ್ನು ಕಡೆಗಣಿಸತಕ್ಕದ್ದು.

10. ತುಟ್ಟಿಭತ್ಯೆ ಬಾಕಿ ಮೊತ್ತವನ್ನು 2023ರ ಮೇ ಮಾಹೆಯ ವೇತನ ಬಟವಾಡೆಗೂ ಮೊದಲು ಪಾವತಿ ಮಾಡತಕ್ಕದ್ದಲ್ಲ.

11. ತುಟ್ಟಿಭತ್ಯೆಯನ್ನು ಸಂಭಾವನೆಯ ವಿಶಿಷ್ಟ ಅಂಶವಾಗಿ ತೋರಿಸುವುದು ಮತ್ತು ಯಾವುದೇ ಉದ್ದೇಶಕ್ಕಾಗಿ ಇದನ್ನು ವೇತನ ಎಂದು ಪರಿಗಣಿಸಲಾಗುವುದಿಲ್ಲ."

ಸರ್ಕಾರದ ಆದೇಶ ಸಂಖ್ಯೆ: ಆಇ 9 ಎಸ್ ಆರ್ ಪಿ 2023 ದಿನಾಂಕ:30-05-2023ರ ಆದೇಶವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳಬಹುದೆಂದು ಉಪ ನಿಯಂತ್ರಕರು (ಹಣಕಾಸು) ರವರ ವರದಿ ದಿನಾಂಕ:7-6-2023ರಂತೆ ಅಭಿಪ್ರಾಯ ವರದಿ ನೀಡಿದ್ದು, ಈ ಹಿನ್ನೆಲೆಯಲ್ಲಿ ತುಟ್ಟಿಭತ್ಯೆಯ ದರಗಳ ಪರಿಷ್ಕರಣೆಯ ಸರ್ಕಾರದ ಆದೇಶ ಸಂಖ್ಯೆ: ಆಇ 9 ಎಸ್ ಆರ್ ಪಿ 2023 ದಿನಾಂಕ:30-05-2023ರ ಸರ್ಕಾರದ ಆರ್ಥಿಕ ಇಲಾಖೆಯ ಆದೇಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಸಂಬಂಧ ಅನುಮೋದನೆ ಕೋರುತ್ತಾ, ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಆಡಳಿತ) ರವರ ದಿನಾಂಕ:14-06-2023ರ ಟಿಪ್ಪಣಿ.

ತೀರ್ಮಾನ : ಇಂತಹ ಪ್ರಸ್ತಾವನೆಗಳಲ್ಲಿ ದಿನಾಂಕ:02-11-2015ರಂದು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ವಿಷಯ ಸಂಖ್ಯೆ: 05/2014-15ರಲ್ಲಿ ಕೈಗೊಂಡಿರುವ ನಿರ್ಣಯದಂತೆ ಮುಖ್ಯ ಆಯುಕ್ತರು ಕ್ರಮಕೈಗೊಳ್ಳುವ ಷರತ್ತಿಗೊಳಪಟ್ಟು, ವಿಶೇಷ ಆಯುಕ್ತರು (ಆಡಳಿತ) ರವರ ದಿನಾಂಕ: 14-06-2023ರ ಟಿಪ್ಪಣಿಯನ್ನು ಒಪ್ಪಿದೆ.

(ರಾಕೇಶ್ ಸಿಂಗ್)
ಆಡಳಿತಗಾರರು

**ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: ೨೨ – ೦೬ –2023ರ ನಡವಳಿಗಳು**

**ವಿಷಯದ ಸಂಖ್ಯೆ: 28/2023-24**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, 2022ನೇ ಸಾಲಿನ ನಾಡಪ್ರಭು ಕೆಂಪೇಗೌಡ ದಿನಾಚರಣೆಯ ಅಂಗವಾಗಿ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ವಾಹನ ಚಾಲಕರು ಹಾಗೂ ಸಮಾನ ಕೆಲಸಕ್ಕೆ ಸಮಾನ ವೇತನ ವಾಹನ ಚಾಲಕರುಗಳಿಗೆ ಬೋನಸ್ ರೂಪದಲ್ಲಿ ನಗದಾಗಿ ರೂ.21,000/-ಗಳನ್ನು ಪಾವತಿಸಲು ಸೂಚಿಸಿರುವ ಮೇರೆಗೆ 2022ನೇ ಸಾಲಿಗೆ ರೂ.21,000/-ಗಳನ್ನು ಮಂಜೂರಾತಿ ನೀಡಲಾಗಿದೆ.

ಮುಂದುವರೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚಾಲಕರ, ಶುಚಿಗಾರರು ಹಾಗೂ ದುರಸ್ಥಿಗಾರರ ಸಂಘದ ವತಿಯಿಂದ ದಿನಾಂಕ:21-03-2023ರಂದು ಪತ್ರವನ್ನು ಸಲ್ಲಿಸಿ ನಾಡಪ್ರಭು ಕೆಂಪೇಗೌಡ ದಿನಾಚರಣೆಯ ಪ್ರಯುಕ್ತ ಚಾಲಕರುಗಳಿಗೆ ಪ್ರತಿ ವರ್ಷವು ಬೋನಸ್ ರೂಪದಲ್ಲಿ ನಗದಾಗಿ ರೂ.21,000/-ಗಳನ್ನು ಪಾವತಿಸಿ ಗೌರವಿಸಲಾಗಿರುತ್ತದೆ. ಅದೇ ರೀತಿ 2023ನೇ ಸಾಲಿನ ನಾಡಪ್ರಭು ಕೆಂಪೇಗೌಡ ದಿನಾಚರಣೆಯ ಅಂಗವಾಗಿ ರೂ.21,000/- ರಿಂದ 25,000/--ಗಳ ಹಣವನ್ನು ನೀಡಬೇಕೆಂದು ಮನವಿ ಮಾಡಿಕೊಂಡಿರುತ್ತಾರೆ.

ತತ್ಸಂಬಂಧವಾಗಿ 2023ನೇ ಸಾಲಿನ ನಾಡಪ್ರಭು ಕೆಂಪೇಗೌಡ ದಿನಾಚರಣೆಯ ಅಂಗವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ವಾಹನ ಚಾಲಕರು ಹಾಗೂ ಸಮಾನ ಕೆಲಸಕ್ಕೆ ಸಮಾನ ವೇತನ ವಾಹನ ಚಾಲಕರುಗಳಿಗೆ ಬೋನಸ್ ರೂಪದಲ್ಲಿ ನಗದಾಗಿ ರೂ.21,000/-ಗಳನ್ನು ನೀಡಲು ಅನುಮೋದನೆ ಕೋರುತ್ತಾ, ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಆಡಳಿತ)ರವರ ದಿನಾಂಕ:14-06-2023ರ ಟಿಪ್ಪಣಿ.

**ತೀರ್ಮಾನ: ವಿಶೇಷ ಆಯುಕ್ತರು (ಆಡಳಿತ) ರವರ ದಿನಾಂಕ:14-06-2023ರ ಟಿಪ್ಪಣಿಯನ್ನು ಒಪ್ಪಿದೆ.**

**(ರಾಕೇಶ್ ಸಿಂಗ್)**
**ಆಡಳಿತಗಾರರು**

## ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: ೨೨– ೦೬ –2023ರ ನಡವಳಿಗಳು

**ವಿಷಯದ ಸಂಖ್ಯೆ:29/2023–24**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರತಿ ವರ್ಷದಂತೆ, ಡಾ॥ ಬಿ.ಆರ್.ಅಂಬೇಡ್ಕರ್ ಜಯಂತಿಯನ್ನು ಪೌರಕಾರ್ಮಿಕರ ದಿನಾಚರಣೆಯನ್ನಾಗಿ ಆಚರಿಸುವ ಸಂಬಂಧ, ಪೌರಕಾರ್ಮಿಕರು. ಗ್ಯಾಂಗ್‌ಮನ್, ತೋಟಗಾರಿಕೆ ಮಾಲಿ, ತೋಟಗಾರಿಕೆ ಮೇಸ್ತ್ರಿ, ಎ.ಎಲ್.ಓ/ಎಂ.ಸಿ/ಸೈನೋಗ್ಯಾಸ್/ ಡಿಸ್ಇನ್‌ಫೆಕ್ಷನ್ ಗ್ಯಾಂಗ್‌ಮನ್, ಸ್ಯಾನಿಟರಿ, ದಫೇದಾರ್‌ಗಳು ಹಾಗೂ ಜವಾನರುಗಳು ಮತ್ತು ಟಪಾಲು ರವಾನೆಗಾರರು, ಆಯಾ, ಹೊಸ ವಲಯಗಳಾದ ಯಲಹಂಕ, ಬೊಮ್ಮನಹಳ್ಳಿ, ಮಹದೇವಪುರ, ರಾ.ರಾ.ನಗರ, ದಾಸರಹಳ್ಳಿ ವಲಯಗಳಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನ ಹಾಗೂ ಕನಿಷ್ಠ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು, 'ಡಿ' ಗ್ರೂಪ್‌ಗೆ ಸಂಬಂಧ ಪಡುವ ವಾಟರ್‌ಮೆನ್‌ಗಳು, ಅಟೆಂಡರ್, ಜವಾನರು, ಟಪಾಲು ರವಾನೆಗಾರರಿಗೆ ('ಡಿ' ಗ್ರೂಪ್‌ಗೆ ಸಂಬಂಧ ಪಡುವ ಎಲ್ಲಾ ಖಾಯಂ ಹಾಗೂ ಸಮಾನ ಕೆಲಸಕ್ಕೆ ಸಮಾನ ವೇತನದ ನೌಕರರುಗಳಿಗೆ) ಕಳೆದ ವರ್ಷ ಬೋನಸ್ ಹಣವನ್ನು ಪಾವತಿಸಿದ್ದು, ಈ ವರ್ಷವು ಬೋನಸ್ ಹಣವನ್ನು ನೀಡುವ ಬಗ್ಗೆ ವಿಶೇಷ ಆಯುಕ್ತರು (ಆಡಳಿತ) ರವರು ಆಡಳಿತಗಾರರಿಗೆ ತುರ್ತಾಗಿ ಟಿಪ್ಪಣಿಯೊಂದಿಗೆ ಕಡತ ಮಂಡಿಸಲು ಆದೇಶಿಸಲಾಗಿರುತ್ತದೆ.

ಅದರಂತೆ, ಮಾನ್ಯ ಮುಖ್ಯ ಆಯುಕ್ತರು ರವರ ಆದೇಶ ಸಂಖ್ಯೆ: ವಿಆ(ಹ)/ಪಿಆರ್/143/22–23, ದಿನಾಂಕ: 29–04–2022ರಂದು 2022ನೇ ಸಾಲಿನ ಡಾ॥ಬಿ.ಆರ್. ಅಂಬೇಡ್ಕರ್, ಜಯಂತಿಯನ್ನು ಪೌರಕಾರ್ಮಿಕರ ದಿನಾಚರಣೆಯನ್ನಾಗಿ ಆಚರಿಸುವ ಪ್ರಯುಕ್ತ ಪೌರಕಾರ್ಮಿಕರು, ಗ್ಯಾಂಗ್‌ಮೆನ್, ತೋಟಗಾರಿಕೆ ಮಾಲಿ, ತೋಟಗಾರಿಕೆ ಮೇಸ್ತ್ರಿ, ಎ.ಎಲ್.ಓ/ಎಂ.ಸಿ/ಸೈನೋಗ್ಯಾಸ್/ ಡಿಸ್ಇನ್‌ಫೆಕ್ಷನ್ ಗ್ಯಾಂಗ್‌ಮನ್, ಸ್ಯಾನಿಟರಿ ದಫೇದಾರ್‌ಗಳು ಹಾಗೂ ಜವಾನರುಗಳು ಮತ್ತು ಟಪಾಲು ರವಾನೆಗಾರರು, ಆಯಾ, ಹೊಸ ವಲಯಗಳಾದ ಯಲಹಂಕ, ಬೊಮ್ಮನಹಳ್ಳಿ, ಮಹದೇವಪುರ, ರಾ.ರಾ.ನಗರ, ದಾಸರಹಳ್ಳಿ ವಲಯಗಳಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನ ಹಾಗೂ ಕನಿಷ್ಠ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು, 'ಡಿ' ಗ್ರೂಪ್‌ಗೆ ಸಂಬಂಧ ಪಡುವ ವಾಲ್‌ಮೆನ್‌ಗಳು, ಅಟೆಂಡರ್, ಜವಾನರು, ಟಪಾಲು ರವಾನೆಗಾರರಿಗೆ ('ಡಿ' ಗ್ರೂಪ್‌ಗೆ ಸಂಬಂಧ ಪಡುವ ಎಲ್ಲಾ ಖಾಯಂ ಹಾಗೂ ಸಮಾನ ಕೆಲಸಕ್ಕೆ ಸಮಾನ ವೇತನದ ನೌಕರರುಗಳಿಗೆ) ರೂ.21,000/–ಗಳನ್ನು ಅವರವರ ಬ್ಯಾಂಕಿನ ಖಾತೆಗೆ ತಪ್ಪದೇ ಪಾವತಿ ಮಾಡಲು ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಆದೇಶಿಸಲಾಗಿರುತ್ತದೆ.

ಮುಂದುವರೆದು, ಮಾನ್ಯ ಮುಖ್ಯ ಆಯುಕ್ತರು ರವರ ಆದೇಶ ಸಂಖ್ಯೆ:ಬಿ12(1)ಪಿಆರ್/252/19–20, ದಿನಾಂಕ: 23–06–2022ರಂದು 2022ನೇ ಸಾಲಿನ ಡಾ॥ ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ಪೌರಕಾರ್ಮಿಕರ ದಿನಾಚರಣೆಯನ್ನಾಗಿ ಆಚರಿಸುವ ಪ್ರಯುಕ್ತ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೇರ ವೇತನ ಪಡೆಯುತ್ತಿರುವ ಪೌರಕಾರ್ಮಿಕರುಗಳಿಗೆ ತಲಾ ರೂ.7,000/–ಗಳ ಬೋನಸ್ ಹಣವನ್ನು ಪಾವತಿ ಮಾಡಲು ಆದೇಶಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ತಮ್ಮ ಆದ್ಯ ಗಮನಕ್ಕೆ ತರುತ್ತಾ, 2023ನೇ ಸಾಲಿನ ಡಾ॥ಬಿ.ಆರ್.ಅಂಬೇಡ್ಕರ್ ಜಯಂತಿಯನ್ನು ಪೌರಕಾರ್ಮಿಕರ ದಿನಾಚರಣೆಯನ್ನಾಗಿ ಆಚರಿಸುವ ಪ್ರಯುಕ್ತ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಖಾಯಂ ಗ್ರೂಪ್ ಡಿ ನೌಕರರುಗಳಿಗೆ ರೂ.21,000/–ಗಳ ಬೋನಸ್ ಮತ್ತು ನೇರ ವೇತನ ಪಡೆಯುತ್ತಿರುವ ಪೌರಕಾರ್ಮಿಕರುಗಳಿಗೆ ತಲಾ ರೂ.7,000/–ಗಳ ಬೋನಸ್ ರೂಪದಲ್ಲಿ ನೀಡಲು ಅನುಮೋದನೆ ಕೋರುತ್ತಾ, ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಆಡಳಿತ) ದಿನಾಂಕ:16–06–2023ರ ಟಿಪ್ಪಣಿ.

**ತೀರ್ಮಾನ: ವಿಶೇಷ ಆಯುಕ್ತರು (ಆಡಳಿತ) ರವರ ದಿನಾಂಕ:16–06–2023ರ ಟಿಪ್ಪಣಿಯನ್ನು ಒಪ್ಪಿದೆ.**

(ರಾಕೇಶ್ ಸಿಂಗ್)
ಆಡಳಿತಗಾರರು

# ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 22 – 06 –2023ರ ನಡವಳಿಗಳು

## ವಿಷಯ ಸಂಖ್ಯೆ:30/2023-24

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಜಯಮಹಲ್ ರಸ್ತೆಯನ್ನು ಮೇಖ್ರಿ ವೃತ್ತದಿಂದ ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದವರೆಗೆ ರಸ್ತೆ ಅಗಲೀಕರಣ ಸಂಬಂಧ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ:3303/97ರ ಐ.ಎ ಸಂಖ್ಯೆ:13/2011ರಲ್ಲಿ ದಿನಾಂಕ:21.11.2014ರಂದು ನೀಡಿರುವ ಆದೇಶದನುಸಾರ ರೈಲ್ವೆ ಕೆಳಸೇತುವೆ ಮುಖಾಂತರ ಮಿಲ್ಲರ್ಸ್ ರಸ್ತೆಯಿಂದ ಜಯಮಹಲ್ ರಸ್ತೆಯವರೆಗೆ ಸಂಪರ್ಕ ಕಲ್ಪಿಸಲು ಪಾಲಿಕೆಯು ಬಳಸಿಕೊಂಡಿರುವ ಸ್ವತ್ತು ಮೇ॥ ಚಾಮುಂಡಿ ಹೋಟೆಲ್ ಪ್ರೈ.ಲಿ ರವರ ಮಾಲೀಕತ್ವಕ್ಕೆ ಸೇರಿದ ಸ್ವತ್ತಾಗಿದ್ದು, ಕಾಮಗಾರಿಗೆ ಬಳಸಿಕೊಂಡಿರುವ ವಿಸ್ತೀರ್ಣಕ್ಕೆ ಪರಿಹಾರವಾಗಿ ಡಿ.ಆರ್.ಸಿ ನೀಡುವಂತೆ ಕೋರಲಾಗಿದೆ.

ಇದೇ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪಿಲು ಸಂಖ್ಯೆ:3303/97ರ ಐ.ಎ ಸಂಖ್ಯೆ:13/2011ರಲ್ಲಿ ದಿನಾಂಕ:21.11.2014ರಂದು ನೀಡಿರುವ ಆದೇಶ ಮತ್ತು ತದನಂತರ, ಸದರಿ ಪ್ರಕರಣದಲ್ಲಿ ರಾಜ್ಯ ಸರ್ಕಾರವು ದಾಖಲಿಸಿರುವ ಐ.ಎ ಸಂಖ್ಯೆ:98276/2021ರಲ್ಲಿ ದಿನಾಂಕ:17.05.2022ರಂದು ನೀಡಿರುವ ಆದೇಶವನ್ನು ಅನುಪಾಲನೆ ಮಾಡಿಲ್ಲವೆಂದು ಮೇ॥ ಚಾಮುಂಡಿ ಹೋಟೆಲ್ ಪ್ರೈ.ಲಿ ರವರು ಮಾನ್ಯ ಸರ್ವೋಚ್ಚ ನ್ಯಾಯಾಲಯಲ್ಲಿ . ನ್ಯಾಯಾಲಯ ನಿಂದನಾ ಅರ್ಜಿ ಸಂಖ್ಯೆ:578/2022 ಅನ್ನು ದಾಖಲಿಸಿರುತ್ತಾರೆ.

ಸಿವಿಲ್ ಅಪಿಲು ಸಂಖ್ಯೆ; 3303/97ರ ಐ.ಎ ಸಂಖ್ಯೆ:13/2011ರಲ್ಲಿ ದಿನಾಂಕ: 21.11.2014 ರಂದು ನೀಡಿರುವ ಆದೇಶವು ಈ ಕೆಳಕಂಡಂತಿರುತ್ತದೆ.

6. Regarding details of the land measuring 15 acres 39 guntas paragraph 5 of the present I.A. No. 13 of 2011 is reproduced below: -

> *"5. It is submitted that the Commissioner of B.B.M.P. has written one more letter dated 0505.2010 to the Additional Chief Secretary and Principal Secretary, Urban Development Department, Bangalore, bringing to his notice the Project for Road widening and copy of the said letter dated 05.05.2010 is herewith produced and marked as ANNEXURE-R4. The statement showing the area of land of Bangalore Palace Ground required for widening the Bellary Road from B.D.A. junction to Mekhri Circle [2.55 Kms. To 4.05 Kms. = 1.5 Km.] is as under:*

| *Sl. No.* | *Name of the Owner* | *From* | *Change [in Km.] To* | *Length in Mtr.* | *Average Width in* | *Area in sq. Mtr.* |
|---|---|---|---|---|---|---|
| *1* | *2* | *3* | *4* | *5* | *6* | *7* |

| | | | | | | |
|---|---|---|---|---|---|---|
| 1. | Sri Srikantadatta N. Wadiyar | 2.55 | 3.227 | 667.00 | 18.38 | 12446.00 |
| 2. | Miss Minakshi Devi | 3.227 | 3+385.50 | 158.50 | 23.40 | 3710.00 |
| 3. | Miss Kamakshi Devi | 3+384.5 | 3.545 | 158.50 | 17.75 | 2813.50 |
| 4. | Miss Vishalakshi Devi | 3.544 | 3+702.50 | 158.50 | 18.65 | 2955.50 |
| 5. | Sri Sridhar Ramachandraraju Urs | 3+702.50 | 3+895.50 | 193.00 | 17.49 | 3375.87 |
| 6. | Smt. Indirakshi Devi | 3+895.50 | 4.05 | 154.50 | 6.18 | 955.12 |
| | Total [A] | | | 1500.00 | | 26256.00 |

[B] Land of Bangalore Palace Ground required for Jayamahal Road Widening from Mekhri Circle to Cantonment Railway Station is as under:

| Sl. No. | Name of the Owner | From | Chanage [in Km.] To | Length in Mtr. | Average Width in | Area in sq. Mtr. |
|---|---|---|---|---|---|---|
| 1 | 2 | 3 | 4 | 5 | 6 | 7 |
| 1. | Sri Srikantadatta N. Wadiyar | 0+000 | 1.582 | 1582.00 | 17.19 | 27201.25 |
| 2. | Miss Indrakshi Devi | 0+650 | 0+700 | 50.00 | 3.2 | 160.00 |
| 3. | Sri A. Chandrashekar Raja M/s. Chamundi Hotels Pvt. Ltd. | 1.582 | 2.74 | 1158.00 | 9.53 | 11038.75 |
| | Total [B] | | | 2790.00 | -- | 38400.00 |

Grand Total : [A+B] = 64.656.00 Sqm. [15A – 39G]

A copy of the sketch showing the widening of the road is herewith produced and marked as ANNEXURE-R5."

> of land acquired as per Karnataka Town & Country Planning Act, and the TDR guidelines subject to the final decision of the Hon'ble Supreme Court."

The State, however, did not grant its approval to this proposal and has instead offered to pay compensation for the acquisition as per the rates relevant at the time of the passing of the Act. The impasse is, therefore, to be crossed.

*10.* In the above circumstances, having considered the submissions of learned counsel for the parties, including learned counsel for the parties in all the connected appeals, without prejudice to the rights of the parties, and keeping in mind the necessity of widening of the road, and the public interest, we think it just and proper to allow I.A. No. 13 of 2011 subject to condition that the appellants in the present appeal and the connected appeals shall be given TDR for widening of the road as per TDR Rules.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ:ನಅಇ 269 ಎಂಎನ್‌ವೈ 2018 (ಭಾಗ-4) ಬೆಂಗಳೂರು, ದಿನಾಂಕ:08.12.2022ರ ಮಾನ್ಯ ಸರ್ಕಾರದ ಆದೇಶದಲ್ಲಿ, ಸ್ವತ್ತಿನ ಮಾಲೀಕತ್ವದ ಕುರಿತು ಸಕ್ಷಮ ನ್ಯಾಯಾಲಯಗಳಲ್ಲಿ ಯಾವುದೇ ವಿವಾದ ಇದ್ದಲ್ಲಿ, ವಿವಾದವು ಇತ್ಯರ್ಥವಾಗುವವರೆಗೆ ಟಿ.ಡಿ.ಆರ್ ನೀಡಲು ಅವಕಾಶವಿರುವುದಿಲ್ಲವಾದ್ದರಿಂದ ಮತ್ತು ಇದು ರಾಜ್ಯ ಸರ್ಕಾರದ ಹಿತಾಸಕ್ತಿಗೆ ವಿರುದ್ಧವಾಗಿರುವುದರಿಂದ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬಳಿ ಲಭ್ಯವಿರುವ ಜಾಗದಲ್ಲಿ (Way of Right) ರಸ್ತೆಯನ್ನು ವಿಸ್ತರಿಸಲು ಪರ್ಯಾಯ ಮಾರ್ಗೋಪಾಯಗಳನ್ನು ಯೋಜಿಸಿ, ಬಿಬಿಎಂಪಿಯು ಈಗಾಗಲೇ ಕ್ರಮವಹಿಸಿರುವುದರಿಂದ, ಪ್ರಶ್ನಿತ ಬೆಂಗಳೂರು ಅರಮನೆ ಮೈದಾನದ ಸ್ವತ್ತಿನ ಭಾಗಶಃ 15 ಎಕರೆ 39 ಗುಂಟೆ ಜಾಗವನ್ನು ಜಯಮಹಲ್ ರಸ್ತೆ ಮತ್ತು ಬಳ್ಳಾರಿ ರಸ್ತೆ ವಿಸ್ತರಣೆ ಉದ್ದೇಶಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಶಕ್ಕೆ ಪಡೆಯುವ ಪ್ರಸ್ತಾವನೆಯನ್ನು ಕೈಬಿಟ್ಟು ಆದೇಶಿಸಿರುತ್ತದೆ.

ಮುಂದುವರೆದು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪಿಲು ಸಂಖ್ಯೆ;3303/97ರ ಐ.ಎ ಸಂಖ್ಯೆ:13/2011ರಲ್ಲಿ ದಿನಾಂಕ:21.11.2014 ರ ಆದೇಶದ ಅನುಸಾರ ಕ್ರಮವಹಿಸುವ ಸಂಬಂಧ ಪರಿಶೀಲಿಸಲಾಗಿ C.T.S No.417, P.T Sheet No.906 ರಲ್ಲಿ ಭಾಗಶಃ ಸ್ವತ್ತನ್ನು ಬಳಸಿಕೊಂಡು ರೈಲ್ವೆ ಕೆಳಸೇತುವೆ ಮುಖಾಂತರ ಮಿಲ್ಲರ್ಸ್ ರಸ್ತೆಯಿಂದ ಜಯಮಹಲ್ ರಸ್ತೆಯವರೆಗೆ ಸಂಪರ್ಕ ಕಲ್ಪಿಸಲು ಸದರಿ ಸ್ವತ್ತಿನಲ್ಲಿ 1217.41ಚ.ಮಿ ವಿಸ್ತೀರ್ಣವನ್ನು ಬಳಸಿಕೊಂಡಿರುವುದು ಉಪ ಆಯುಕ್ತರು (ಭೂಸ್ವಾಧೀನ ಮತ್ತು ಟಿ.ಡಿ.ಆರ್) ಕಛೇರಿಯ ಭೂಮಾಪನಾ ಶಾಖೆಯವರು ನೀಡಿರುವ ಸರ್ವೆ ನಕ್ಷೆಯಿಂದ ತಿಳಿದುಬಂದಿರುತ್ತದೆ.

ಸಿವಿಲ್ ಅಪಿಲು ಸಂಖ್ಯೆ:3303/97ರ ಐ.ಎ ಸಂಖ್ಯೆ:13/2011ರಲ್ಲಿ ದಿನಾಂಕ:21.11.2014ರ ಆದೇಶ ಪಾಲನೆ ಸಂಬಂಧ ಸಾರ್ವಜನಿಕ ಉಪಯೋಗಕ್ಕೆ ಅವಶ್ಯವಿರುವ ಜಾಗವನ್ನು ಈಗಾಗಲೇ ಸ್ವಾಧೀನಪಡಿಸಿಕೊಂಡು ರಸ್ತೆ ಅಗಲೀಕರಣ ಕಾಮಗಾರಿ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಹಾಗೂ ಸದರಿ ಪ್ರಸ್ತಾವನೆಯು ಪರಿಷ್ಕೃತ ಮಹಾಯೋಜನೆ-2015ರಲ್ಲಿ ಸೇರಿರುವುದಿಲ್ಲವಾದುದರಿಂದ ಸರ್ಕಾರದ ಅಧಿಸೂಚನೆ ಸಂಖ್ಯೆ:UDD/208/BBL /2021(e) dated:23.09.2022ರಂತೆ ಟಿಡಿಆರ್ ಯೋಜನೆಯಡಿ ನಮೂನೆ-1ರ ಅಧಿಸೂಚನೆ ಪ್ರಕಟಿಸಲು ಅನುಮೋದನೆ ಕೋರುತ್ತಾ, ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಕಂದಾಯ) ರವರ ದಿನಾಂಕ:21--06-2023ರ ಟಿಪ್ಪಣಿ.

**ತೀರ್ಮಾನ: ವಿಶೇಷ ಆಯುಕ್ತರು (ಕಂದಾಯ) ರವರ ದಿನಾಂಕ: 21-06-2023ರ ಟಿಪ್ಪಣಿಯನ್ನು ಒಪ್ಪಿದೆ.**

(ರಾಕೇಶ್ ಸಿಂಗ್)
ಆಡಳಿತಗಾರರು

## ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: ೨೬ -೦೬ -2023ರ ನಡವಳಿಗಳು

**ವಿಷಯದ ಸಂಖ್ಯೆ:32/2023-24**

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 93-ಶಿಶುವಿಹಾರ ಶಾಲೆ, 18-ಪದವಿ ಪೂರ್ವ ಕಾಲೇಜು, 04-ಪದವಿ ಕಾಲೇಜು ಹಾಗೂ 2 ಸ್ನಾತಕೋತ್ತರ ಪದವಿ ಕಾಲೇಜುಗಳು ಇದ್ದು, 2023-24ನೇ ಶೈಕ್ಷಣಿಕ ವರ್ಷದ ಶಾಲಾ ಕಾಲೇಜುಗಳ ತರಗತಿಗಳು ಆರಂಭವಾಗಿದ್ದು, ಅಂದಾಜು 13,600 ವಿದ್ಯಾರ್ಥಿಗಳು ಸದರಿ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದು, ಮೆ॥ ಅಕ್ಷಯ ಪಾತ್ರ ಫೌಂಡೇಷನ್ ವತಿಯಿಂದ ಬಿಸಿ ಊಟವನ್ನು ಪ್ರತಿ ವರ್ಷ ಸರಬರಾಜು ಮಾಡಲಾಗುತ್ತಿರುತ್ತದೆ.

ಪಾಲಿಕೆಯ ಶಿಶುವಿಹಾರ ಶಾಲೆ ಹಾಗೂ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಮಧ್ಯಮ ವರ್ಗ ಹಾಗೂ ಬಡ ಕುಟುಂಬದಿಂದ ಬಂದಂತಹ ಮಕ್ಕಳುಗಳು ಇದ್ದು, ಇಂತಹ ಮಕ್ಕಳನ್ನು ಶಾಲೆಗೆ ಸೆಳೆಯುವ ಹಿತದೃಷ್ಟಿಯಿಂದ ಈಗಾಗಲೇ ಜಿಲ್ಲಾ ಪಂಚಾಯಿತಿ ವತಿಯಿಂದ ಪಾಲಿಕೆಯ 1 ರಿಂದ 10ನೇ ತರಗತಿಯವರೆಗೆ ಉಚಿತವಾಗಿ ಬಿಸಿ ಊಟವನ್ನು ಮೆ॥ ಅಕ್ಷಯ ಪಾತ್ರ ರವರಿಂದ ನೀಡಲಾಗುತ್ತಿದೆ. ಹಿನ್ನೆಲೆಯಲ್ಲಿ, ಅದರಂತೆ ಪಾಲಿಕೆಯ ವತಿಯಿಂದ ಶಿಶುವಿಹಾರ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಪಾಲಿಕೆಯ ಅನುದಾನದಲ್ಲಿ ಮೆ॥ ಅಕ್ಷಯ ಪಾತ್ರ ವತಿಯಿಂದ ಬಿಸಿಯೂಟ ಸರಬರಾಜನ್ನು ಇಲ್ಲಿಯವರೆವಿಗೂ ಮುಂದುವರೆಸಿಕೊಂಡು ಬರಲಾಗುತ್ತಿರುತ್ತದೆ.

**ಮೆ॥ ಅಕ್ಷಯ ಪಾತ್ರ ಪೌಂಡೇಷನ್ ಸಂಸ್ಥೆಯವರು ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಸರಬರಾಜು ಮಾಡುವ ಊಟಕ್ಕೆ ತಗಲುವ ವೆಚ್ಚದ ವಿವರ ಈ ಕೆಳಗಿನಂತಿರುತ್ತದೆ.**

| ಕ್ರ. ಸಂ | ಶಾಲಾ/ಕಾಲೇಜಿನ ವಿವರ | ಒಂದು ಊಟಕ್ಕೆ ತಗಲುವ ವೆಚ್ಚ ರೂ. |
|---|---|---|
| 1 | ಶಿಶುವಿಹಾರ-93 | 12/- |
| 2 | ಪದವಿ ಪೂರ್ವ ಕಾಲೇಜು-18 | 23/- |
| 3 | ಪದವಿ ಕಾಲೇಜು-04 | |
| 4 | ಸ್ನಾತಕೋತ್ತರ ಪದವಿ ಕಾಲೇಜು-02 | |

## 2022-23ನೇ ಸಾಲಿನ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳ ಸಂಖ್ಯಾಬಲದ ವಿವರ.

| ಕ್ರ.ಸಂ | ಶಾಲಾ/ಕಾಲೇಜಿನ ವಿವರ | 2022-23ನೇ ಸಾಲಿನ ವಿದ್ಯಾರ್ಥಿಗಳ ಸಂಖ್ಯೆ. |
|---|---|---|
| 1 | ಶಿಶುವಿಹಾರ-93 | 5466 |
| 2 | ಪದವಿ ಪೂರ್ವ ಕಾಲೇಜು-18 | 6682 |
| 3 | ಪದವಿ ಕಾಲೇಜು-04 | 1339 |
| 4 | ಸ್ನಾತಕೋತ್ತರ ಪದವಿ ಕಾಲೇಜು-02 | 101 |
| | ಒಟ್ಟು | **13,588** |

## 2022-23ನೇ ಸಾಲಿನ ಶಾಲಾ/ಕಾಲೇಜುಗಳಲ್ಲಿ ಬಿಸಿ ಊಟ ಸರಬರಾಜು ಮಾಡಿರುವ ವೆಚ್ಚದ ವಿವರ.

| ಕ್ರ ಸಂ | ಶಾಲಾ/ಕಾಲೇಜಿನ ವಿವರ | ಕಳೆದ ಮಾಹೆಯಲ್ಲಿ ಬಿಸಿ ಊಟ ಪಡೆದ ಸಂಖ್ಯೆ | ತಗಲಿರುವ ವೆಚ್ಚ | ಒಂದು ವರ್ಷಕ್ಕೆ ತಗಲುವ ಬಿಸಿ ಊಟದ ವೆಚ್ಚ |
|---|---|---|---|---|
| 1 | ಶಿಶುವಿಹಾರ-93 | 95,092 x 12 | 11,41,104/- | 1,25,52,144/- |
| 2 | ಪದವಿ ಪೂರ್ವ ಕಾಲೇಜು-18 | 1,23,265 x 23 | 28,35,095/- | 3,11,86,045/- |
| 3 | ಪದವಿ ಕಾಲೇಜು-04 | 24,009 x 23 | 5,52,207/- | 60,74,277/- |
| 4 | ಸ್ನಾತಕೋತ್ತರ ಪದವಿ ಕಾಲೇಜು-02 | 2,251 x 23 | 51,773/- | 5,69,503/- |
| | | ಒಟ್ಟು | **45,80,179/-** | **5,03,81,969/-** |

## 2023-24ನೇ ಸಾಲಿನ ಶಾಲಾ/ಕಾಲೇಜುಗಳಲ್ಲಿ ಬಿಸಿ ಊಟ ಸರಬರಾಜು ಮಾಡಲು ತಗಲುವ ಅಂದಾಜು ವೆಚ್ಚದ ವಿವರ.

| ಕ್ರ ಸಂ | ಶಾಲಾ/ಕಾಲೇಜಿನ ವಿವರ | 2022-23ನೇ ಸಾಲಿನಲ್ಲಿ ಬಿಸಿಊಟ ಸರಬರಾಜು ಮಾಡಲು ತಗಲಿರುವ ವೆಚ್ಚದ ವಿವರ (ಎ) | 2023-24ನೇ ಸಾಲಿನಲ್ಲಿ ವಿದ್ಯಾರ್ಥಿಗಳ ದಾಖಲಾತಿಯನ್ನು ಶೇ. 25% ರಷ್ಟು ಹೆಚ್ಚಿಸ ಬಿಸಿಊಟ ಸರಬರಾಜು ಮಾಡಿದೆ ತಗಲುವ ಅಂದಾಜು ವೆಚ್ಚ (ಬಿ) | ಒಟ್ಟು ಮೊತ್ತ (ಎ ಮತ್ತು ಬಿ) |
|---|---|---|---|---|
| 1 | ಶಿಶುವಿಹಾರ-93 | 1,25,52,144/- x 25% | 31,38,036.00 | 1,56,90,180.00 |
| 2 | ಪದವಿ ಪೂರ್ವ ಕಾಲೇಜು-18 | 3,11,86,045/- x 25% | 77,96,511.25 | 3,89,82,556.25 |

| | | | | |
|---|---|---|---|---|
| 3 | ಪದವಿ ಕಾಲೇಜು–04 | 60,74,277/– x 25% | 15,18,569.25 | 75,92,846.25 |
| 4 | ಸ್ನಾತಕೋತ್ತರ ಪದವಿ ಕಾಲೇಜು–02 | 5,69,503/– x 25% | 1,42,375.75 | 7,11,878.75 |
| | **ಒಟ್ಟು** | **5,03,81,969.00** | **1,25,95,492.25** | **6,29,77,461.25** |

2023–24ನೇ ಸಾಲಿನಲ್ಲಿ ವ್ಯಾಸಂಗ ಮಾಡುವ 93–ಶಿಶುವಿಹಾರ ಶಾಲೆಯ ಮಕ್ಕಳುಗಳಿಗೆ ತಲಾ ಒಂದು ಊಟಕ್ಕೆ ರೂ.12/– ವೆಚ್ಚದಲ್ಲಿ ಹಾಗೂ 18– ಪದವಿ ಪೂರ್ವ ಕಾಲೇಜು, 04–ಪದವಿ ಕಾಲೇಜು ಹಾಗೂ 2–ಸ್ನಾತಕೋತ್ತರ ಪದವಿ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ತಲಾ ಒಂದು ಊಟಕ್ಕೆ ರೂ. ರೂ.23/– ವೆಚ್ಚದಲ್ಲಿ ನಿಗಧಿಪಡಿಸಿ ಮೆ॥ ಅಕ್ಷಯ ಪಾತ್ರ ವತಿಯಿಂದ ಬಿಸಿಯೂಟವನ್ನು ಬಿಸಿ ಊಟವನ್ನು ವಿತರಿಸಲು 2023–24ನೇ ಸಾಲಿನ ಅಯವ್ಯಯದಲ್ಲಿ ಹಂಚಿಕೆಯಾಗಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯ ಪಿ.ಕೋಡ್ ಸಂಖ್ಯೆ:11–221903, ಮಧ್ಯಾಹ್ನದ ಬಿಸಿ ಊಟ ವೆಚ್ಚ ಪಿ–0242, 3138ರಲ್ಲಿ ಮೀಸಲಿರಿಸಿರುವ ಮೊತ್ತ ರೂ:700.00 ಲಕ್ಷಗಳನ್ನು ಮೀಸಲಿರಿಸಲಾಗಿರುತ್ತದೆ.

2023–24ನೇ ಸಾಲಿನಲ್ಲಿ ಸದರಿ ಅನುದಾನವನ್ನು ಬಳಸಿಕೊಂಡು ಶಿಶುವಿಹಾರ, ಪದವಿ ಪೂರ್ವ ಕಾಲೇಜು, ಪದವಿ ಕಾಲೇಜು ಹಾಗೂ ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಬಿಸಿಯೂಟ ಸರಬರಾಜು ಮಾಡಲು 2023–24ನೇ ಸಾಲಿಗೆ ಮೆ॥ ಅಕ್ಷಯ ಪಾತ್ರ ವತಿಯಿಂದ ಸಂಸ್ಥೆಯೊಂದಿಗೆ ಒಡಂಬಡಿಗೆ ಮಾಡಿಕೊಳ್ಳಲು ಅನುಮೋದನೆ ನೀಡಲು ಕೋರುತ್ತಾ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಶಿಕ್ಷಣ) ರವರ ದಿನಾಂಕ:19–06–2022ರ ಟಿಪ್ಪಣಿ.

**ತೀರ್ಮಾನ: ವಿಶೇಷ ಆಯುಕ್ತರು (ಶಿಕ್ಷಣ) ರವರ ದಿನಾಂಕ:19–06–2023ರ ಟಿಪ್ಪಣಿಯನ್ನು ಒಪ್ಪಿದೆ.**

**(ರಾಕೇಶ್ ಸಿಂಗ್)**

**ಆಡಳಿತಗಾರರು**